Navachethana education YouTube & telegram channel Copy Rights Reserve

# ಉತ್ತರ ಅಮೆರಿಕ

## ( ಪ್ರೈರೀಸ್ ಹುಲ್ಲುಗಾವಲು )

### ನೆಲೆ, ಸ್ಥಾನ ಮತ್ತು ವಿಸ್ತೀರ್ಣ

- ಉತ್ತರ ಅಮೆರಿಕವು ಸಂಪೂರ್ಣವಾಗಿ ಸಮಭಾಜಕವೃತ್ತದ ಉತ್ತರದಲ್ಲಿ ನೆಲೆಗೊಂಡಿದೆ.
- ಅದು ಅಕ್ಷಾಂಶಿಕವಾಗಿ 7°ಉತ್ತರ ಆಕಾಂಶದಿಂದ 84° ಉತ್ತರ ಅಕ್ಷಾಂಶದವರೆಗೆ ಹಬ್ಬಿದೆ.
- ಕರ್ಕಾಟಕ ಸಂಕ್ರಾಂತಿ ವೃತ್ತವು (23 ½° ಉ.ಅ) ಈ ಖಂಡದ ದಕ್ಷಿಣದಲ್ಲಿಯೂ ಉತ್ತರ ಮೇರು ವೃತ್ತವು (66 ½° ಉ.ಆರ್ಕ್ಟಿಕ್ ವೃತ್ತ) ಉತ್ತರ ಭಾಗದಲ್ಲಿಯೂ ಹಾದು ಹೋಗಿವೆ.

### ಉತ್ತರ ಅಮೆರಿಕವು

- ಪೂರ್ವದಲ್ಲಿ - ಅಟ್ಲಾಂಟಿಕ್ ಮಹಾಸಾಗರ
- ಪಶ್ಚಿಮದಲ್ಲಿ - ಫೆಸಿಫಿಕ್ ಮಹಾಸಾಗರ
- ಉತ್ತರದಲ್ಲಿ - ಆರ್ಕ್ಟಿಕ್ (ಉತ್ತರ ಶೀತ) ಸಾಗರದಿಂದಲೂ ಸುತ್ತುವರಿದಿದೆ.

**1.ಬೇರಿಂಗ್ ಜಲಸಂಧಿಯು ಯಾವ ಎರಡು ಭೂಭಾಗವನ್ನು ಪ್ರತ್ಯೇಕಿಸುತ್ತದೆ**

- ಉತ್ತರ ಅಮೆರಿಕ & ಏಷ್ಯಾ



Scanned with OKEN Scanner

Navachethana education YouTube & telegram channel Copy Rights Reserve

2. ಜಗತ್ತಿನ ಅತಿ ದೊಡ್ಡ ದ್ವೀಪ - ಗ್ರೀನ್ ಲ್ಯಾಂಡ್

3. ಹಡ್ಸನ್ ಕೊಲ್ಲಿ ಯಾವ ಸಾಗರದಲ್ಲಿ ಕಂಡುಬರುತ್ತದೆ

- ಅಟ್ಲಾಂಟಿಕ್ ಮಹಾಸಾಗರ

4. ವೆಸ್ಟ್ ಇಂಡಿಸ್ ಮತ್ತು ಕ್ಯೂಬಾ ದ್ವೀಪಗಳನ್ನು ಕೆರೆಬಿಯನ್ ಸಮುದ್ರದಲ್ಲಿ ಕಾಣಬಹುದು.

5. ಕೆನಡದ ಪೂರ್ವ ಕರಾವಳಿಯಲ್ಲಿ ನ್ಯೂಫೌಂಡ್‌ಲ್ಯಾಂಡ್ ಪ್ರದೇಶವಿದೆ.

7. ಉತ್ತರ ಅಮೆರಿಕಾ ಖಂಡದ ಎತ್ತರವಾದ ಪರ್ವತ

- ಮೌಂಟ್ ಮ್ಯಾಕ್ ಕಿನ್ಲೆ ( 6194 ಮೀ )

8. ಉತ್ತರ ಅಮೆರಿಕಾ ಖಂಡದ ಅತಿ ತಗ್ಗಾದ ಭಾಗ - ಮೃತ್ಯುಕಣಿವೆ

9. 'ಓಲ್ಡ್ ಫೇಥ್ ಫುಲ್' ಎಂಬುದು ಪ್ರಪಂಚದ ಹೆಸರಾಂತ ಗೈಸರ್ (ಬಿಸಿ ನೀರಿನ ಬಗ್ಗೆ ) ಯಾವ ರಾಷ್ಟ್ರೀಯ ಉದ್ಯಾನವನದಲ್ಲಿ ಕಂಡು ಬರುತ್ತದೆ - ಯೆಲ್ಲೋಸ್ಟೋನ್ ರಾಷ್ಟ್ರೀಯ ಉದ್ಯಾನವನ

10. ಗ್ರಾಂಡ್ ಕ್ಯಾನಿಯನ್ ಕಂದರ ಯಾವ ನದಿಯಿಂದ ಉಂಟಾಗಿದೆ

- ಕೊಲರಾಡೊ ನದಿ



Scanned with OKEN Scanner

Navachethana education YouTube & telegram channel Copy Rights Reserve

11. ಉತ್ತರ ಅಮೆರಿಕಾ ಖಂಡದ ಅತಿ ದೊಡ್ಡ ನದಿ ಯಾವುದು

- ಮಿಸಿಸಿಪ್ಪಿ

◆ ಮಿಸಿಸಿಪ್ಪಿ ನದಿಯು ಪಕ್ಷಿಪಾದದ ಡೆಲ್ಟಾವನ್ನು ನಿರ್ಮಿಸಿದೆ

12. ಗ್ರ್ಯಾಂಡ್ ಕ್ಯಾನಿಯನ್ ಮಹಾಕಂದರವನ್ನು 'ಪ್ರಪಂಚದ ಪ್ರಾಕೃತಿಕ ಅದ್ಭುತ ಎಂದು ಕರೆಯಲಾಗಿದೆ

13. ಅಮೆರಿಕದ ಸಂಯುಕ್ತ ಸಂಸ್ಥಾನ ಮತ್ತು ಕೆನಡಗಳ ಅತಿ ಪ್ರಮುಖವಾದ ನದಿ - ಸೆಂಟ್ ಲಾರೆನ್ಸ್

14. ವಿಶ್ವದ ಅತಿ ದೊಡ್ಡ ಸಿಹಿ ನೀರಿನ ಸರೋವರ - ಸುಪೀರಿಯರ್ ಸರೋವರ

◆ ಉತ್ತರ ಅಮೆರಿಕವು ಅಪಾರ ಸಂಖ್ಯೆಯ ಸಿಹಿನೀರಿನ ಮತ್ತು ಉಪ್ಪು ನೀರಿನ ಸರೋವರಗಳನ್ನು ಹೊಂದಿದೆ. ಅವುಗಳು ಕೆನಡಿಯನ್ ಭೂಫಲಕದ ದಕ್ಷಿಣದ ಗಡಿಭಾಗದಲ್ಲಿ ನೆಲೆಗೊಂಡಿವೆ.

● ಹ್ಯೂರಾನ್, ಒಂಟಾರಿಯೊ, ಮಿಚಿಗನ್, ಐರಿ ಮತ್ತು ಸುಪೀರಿಯರ್‌ಗಳು ಪ್ರಮುಖವಾದ ಸರೋವರಗಳಾಗಿವೆ.

ಒಟ್ಟಾರೆಯಾಗಿ ಸರೋವರಗಳನ್ನು ಹೋಮ್ಸ್ ಎಂದು ಕರೆಯಲಾಗಿದೆ



Scanned with OKEN Scanner

Navachethana education YouTube & telegram channel Copy Rights Reserve

15. ಉತ್ತರ ಅಮೆರಿಕಾ ಖಂಡದ ಕೇಂದ್ರ ಮತ್ತು ದಕ್ಷಿಣ ಪ್ರದೇಶಗಳು ಹರಿಕೇನ್ಸ್ ಮತ್ತು ಟರ್ನೋಡೊಗಳಂತಹ ತೀವ್ರವಾದ ಬಿರುಗಾಳಿಯುಕ್ತ ಪ್ರದೇಶಗಳಾಗಿವೆ.

16. ಸೂಚಿಪರ್ಣ ಅರಣ್ಯಗಳಲ್ಲಿ ಯಾವ ಮರಗಳು ಕಂಡುಬರುತ್ತವೆ. - ಪೈನ್, ಫರ್, ಸ್ಪ್ರೂಸ್, ಲಾರ್ಚ್

17. ಎಲೆಯುದುರುವ ವಿಧದ ಅರಣ್ಯಗಳನ್ನು ಸೆಂಟ್ ಲಾರೆನ್ಸ ಮತ್ತು ಮಹಾಸರೋವರಗಳ ಪೂರ್ವಭಾಗದಲ್ಲಿ ಕಾಣಬಹುದು,

18. "ಗೋಧಿಯ ಕಣಜ ಅಥವಾ 'ರೊಟ್ಟಿಯ ಬುಟ್ಟಿ' ಯಾವ ಖಂಡದಲ್ಲಿ ಕಂಡುಬರುತ್ತದೆ

- ಉತ್ತರ ಅಮೆರಿಕ GPSTR 2017

19. ಉತ್ತರ ಅಮೆರಿಕದಲ್ಲಿ ಯಾವ ಬಗೆಯ ಹುಲ್ಲುಗಾವಲನ್ನು ಪ್ರೈರೀಸ್ ಎನ್ನುವರು ?

- ಸಮಶೀತೋಷ್ಣ ವಲಯದ ಹುಲ್ಲುಗಾವಲು

20. ಉತ್ತರ ಅಮೆರಿಕದಲ್ಲಿ ಮೆಕ್ಕೆಜೋಳವು ಕಾರ್ನ್ ಎಂದು ಪ್ರಖ್ಯಾತಿಪಡೆದಿದೆ.

21. 'ಜಗತ್ತಿನ ಸಕ್ಕರೆ ಬೋಗುಣಿ '- ಕ್ಯೂಬಾ

◈ ಕ್ಯೂಬಾ ವಿಶ್ವದಲ್ಲಿ ಸಕ್ಕರೆ ಉತ್ಪಾದನೆಯ ಮೂರನೇ ಅತಿ ದೊಡ್ಡ ರಾಷ್ಟ್ರವಾಗಿದೆ



Scanned with OKEN Scanner

Navachethana education YouTube & telegram channel Copy Rights Reserve

22. 'ದ್ರಾಕ್ಷಾರಸದ ರಾಜ್ಯ - ಕ್ಯಾಲಿಫೋರ್ನಿಯ GPSTR 2022 ಇಲಾಖೆ ಮಾದರಿ

23. ಉತ್ತರ ಅಮೆರಿಕ ಖಂಡದ ಈಶಾನ್ಯ ಭಾಗದ ಅಂಟ್ಲಾಂಟಿಕ್ ಸಾಗರ ತೀರದಲ್ಲಿ ಗ್ರ್ಯಾಂಡ್ ಬ್ಯಾಂಕ್‌ಗಳು, , ನ್ಯೂಇಂಗ್ಲೆಂಡಿನ ಜಾರ್ಜಸ್ ಬ್ಯಾಂಕ್‌ಗಳು ಮತ್ತು ನ್ಯೂಫೌಂಡ್ ಲ್ಯಾಂಡ್ ಹೆಸರಾಂತ ಮೀನುಗಾರಿಕಾ ಪ್ರದೇಶಗಳಾಗಿವೆ.

24. ಕ್ಯಾಲಿಫೋರ್ನಿಯ ಮತ್ತು ಯೂಕಾಟನ್ ಕಣಿವೆಗಳು ಉತ್ತರ ಅಮೆರಿಕದ ಚಿನ್ನದ ಗಣಿಗಳ ಪ್ರಮುಖ ಪ್ರದೇಶಗಳಾಗಿವೆ.

25. ವಿಶ್ವದ ಪ್ರಮುಖ ಬೆಳ್ಳಿ ಉತ್ಪಾದಿಸುತ್ತಿರುವ ರಾಷ್ಟ್ರ - ಮೆಕ್ಸಿಕೊ

26. ಉತ್ತರ ಅಮೆರಿಕವು ಇಲ್ಲಿನ ಅಪಲೇಷಿಯನ್ ಪ್ರದೇಶದಲ್ಲಿ ಉತ್ತಮ ದರ್ಜೆಯ ಕಲ್ಲಿದ್ದಲ್ಲಿನ ಅಧಿಕ ನಿಕ್ಷೇಪವನ್ನು ಹೊಂದಿದೆ.

27. ಪಿಟ್ಸ್‌ಬರ್ಗ್ ನಗರವನ್ನು 'ಉಕ್ಕಿನ ನಗರ' ಎಂದು ಕರೆಯಲಾಗಿದೆ.

28. ಲಂಬ ಜಾಕ್ಸ್ ಎಂದರೆ - ಕೆನಡದಲ್ಲಿ ಮರಕಡಿಯುವ ವೃತ್ತಿಯನ್ನು ಅವಲಂಬಿಸಿರುವ ಜನರು

29. ಉತ್ತರ ಅಮೆರಿಕದ ಚಿಕಾಗೊ ಕೈಗಾರಿಕಾ ನಗರವಾಗಿದೆ



Scanned with OKEN Scanner

Navachethana education YouTube & telegram channel Copy Rights Reserve

**30. ವಿಶ್ವದಲ್ಲಿ ಅಧಿಕ ಅಣುಶಕ್ತಿಯನ್ನು ಉತ್ಪಾದಿಸುವ ದೇಶ**

- ಅಮೆರಿಕ

## ದಕ್ಷಿಣ ಅಮೆರಿಕ

- ದಕ್ಷಿಣ ಅಮೆರಿಕವು ಪ್ರಪಂಚದ ನಾಲ್ಕನೇ ಅತಿ ದೊಡ್ಡ ಭೂಖಂಡವಾಗಿದೆ. 1498ರಲ್ಲಿ ಕ್ರಿಸ್ಟೋಫರ್ ಕೊಲಂಬಸನು ಈ ಭೂಖಂಡವನ್ನು ತಲುಪಿ, ಅದನ್ನು ಭಾರತವೆಂದು ಭಾವಿಸಿದ. ಅಲ್ಲಿನ ಸ್ಥಳೀಯರನ್ನು ರೆಡ್ ಇಂಡಿಯನ್ಸ್‌ರೆಂದು ಕರೆದನು.

- ದಕ್ಷಿಣ ಅಮೆರಿಕವು ಆ್ಯಂಡೀಸ್ ಪರ್ವತ ಮತ್ತು ಅಮೆಜಾನ್ ನದಿಯಿಂದ ಕೂಡಿರುವ ವಿಶೇಷವಾದ ಭೂಭಾಗವಾಗಿದೆ. ಅದು ಪ್ರಪಂಚದಲ್ಲೇ ಅತ್ಯಧಿಕ ಕಾಫಿಯನ್ನು ಉತ್ಪಾದಿಸುತ್ತಿದೆ. ಆದನ್ನು ಸಾಮಾನ್ಯವಾಗಿ 'ಹುಲ್ಲುಗಾವಲುಗಳ ನಾಡು' ಎಂದು ಕರೆಯಲಾಗಿದೆ.

### ನೆಲೆ, ವಿಸ್ತಾರ ಮತ್ತು ಭೌತಿಕ ಅಂಶಗಳು

- ದಕ್ಷಿಣ ಅಮೆರಿಕ ಖಂಡದ ಬಹುಭಾಗವು ದಕ್ಷಿಣಾರ್ಧಗೋಳದಲ್ಲಿದೆ. ಭೂಮಧ್ಯರೇಖೆ ಮತ್ತು ಮಕರ ಸಂಕ್ರಾಂತಿ ವೃತ್ತಗಳು ಈ ಖಂಡದ ಮೂಲಕ ಹಾದುಹೋಗಿವೆ.



Scanned with OKEN Scanner

Navachethana education YouTube & telegram channel Copy Rights Reserve

- ಅಕ್ಷಾಂಶಿಕ ವಿಸ್ತೀರ್ಣವು 12° ಉ. ಅಕ್ಷಾಂಶದಿಂದ 56° ದಕ್ಷಿಣ ಅಕ್ಷಾಂಶದವರೆಗೂ ಮತ್ತು ರೇಖಾಂಶಿಕವಾಗಿ 35° ಪ. ರೇಖಾಂಶದಿಂದ 81° ಪಶ್ಚಿಮ ರೇಖಾಂಶದವರೆಗೂ ವಿಸ್ತರಿಸಿದೆ. ದಕ್ಷಿಣ ಅಮೆರಿಕ ಖಂಡವು ಪಶ್ಚಿಮಾರ್ಧಗೋಳದಲ್ಲಿ ನೆಲೆಗೊಂಡಿದೆ.

ಉತ್ತರದಲ್ಲಿ ಪನಾಮ ಕಾಲುವೆಯು ಉತ್ತರ ಅಮೆರಿಕ ಮತ್ತು ದಕ್ಷಿಣ ಅಮೆರಿಕಗಳನ್ನು ಪ್ರತ್ಯೇಕಿಸಿದೆ.

ದಕ್ಷಿಣ ಅಮೆರಿಕ ಖಂಡವು

- ಉತ್ತರದಲ್ಲಿ- ಕೆರಿಬಿಯನ್ ಸಮುದ್ರಗಡಿ
- ಪೂರ್ವ ಮತ್ತು ಈಶಾನ್ಯ ಭಾಗದಲ್ಲಿ - ಅಟ್ಲಾಂಟಿಕ್ ಸಾಗರ
- ಪಶ್ಚಿಮದಲ್ಲಿ - ಪೆಸಿಫಿಕ್ ಮಹಾಸಾಗರ
- ದಕ್ಷಿಣದಲ್ಲಿ - ಅಂಟಾರ್ಕ್ಟಿಕ್ ಸಾಗರದ ಹಿಮನೀರಿನಿಂದ ಆವರಿಸಲ್ಪಟ್ಟಿದೆ.

ದಕ್ಷಿಣ ಆಮೆರಿಕದ ಒಟ್ಟು ಭೂಭಾಗವು ಸುಮಾರು 177. ಲಕ್ಷ ಚ.ಕಿ.ಮೀ.ಗಳಷ್ಟಿದ್ದು ಅದು ಭಾರತಕ್ಕಿಂತಲೂ 3-1/2 ಪಟ್ಟು ದೊಡ್ಡದಾಗಿದೆ. ಈ ಖಂಡದಲ್ಲಿ ಒಟ್ಟು ಹದಿಮೂರು ರಾಷ್ಟ್ರಗಳಿವೆ. ಬ್ರೆಜಿಲ್ ಆತಿ ದೊಡ್ಡ ಮತ್ತು ಫ್ರೆಂಚ್ ಗಯಾನವು ಅತಿ ಚಿಕ್ಕ ರಾಷ್ಟ್ರವಾಗಿದೆ. ಬೊಲಿವಿಯಾ ಮತ್ತು ಪರಾಗ್ವೆ ದಕ್ಷಿಣ ಅಮೆರಿಕದ ಎಲ್ಲಾ ದೇಶಗಳು ಕರಾವಳಿ ತೀರವನ್ನು ಹೊಂದಿವೆ. ಚಿಲಿ ದೇಶವು ನೀಳವಾದ ರಾಷ್ಟ್ರವಾಗಿದೆ.



Scanned with OKEN Scanner

Navachethana education YouTube & telegram channel Copy Rights Reserve

1. ದಕ್ಷಿಣ ಅಮೆರಿಕದ ಅತ್ಯಂತ ಉದ್ದವಾದ ಪರ್ವತ ಸರಣಿ ಯಾವುದು – ಆ್ಯಂಡೀಸ್ ಪರ್ವತಗಳು ( 6.440 ಕಿ.ಮೀ )

- ಇದು ಪ್ರಪಂಚದ ಅತ್ಯಂತ ಉದ್ದವಾದ ಪರ್ವತ ಸರಣಿಯಾಗಿದೆ - ಆ್ಯಂಡೀಸ್ ಪರ್ವತಗಳು

2. ಅರ್ಜೆಂಟೈನಾ-ಚಿಲಿ ಗಡಿಭಾಗದಲ್ಲಿರುವ ಅತಿ ಎತ್ತರದ ಶಿಖರ - ಮೌಂಟ್ ಅಕನ್‌ಕಾಗುವ

3. ಓರಿನೊಕೊ ನದಿಯ ಉಪನದಿಯಾದ ಚೂರನ್ ವಿಶ್ವದ ಅತ್ಯಂತ ಎತ್ತರವಾದ ಏಂಜಲ್ ಜಲಪಾತವನ್ನು (974 ಮೀ.) ಗಯಾನ ಭೂಫಲಕದಲ್ಲಿ ನಿರ್ಮಾಣಮಾಡಿದೆ.

4. ದಕ್ಷಿಣ ಅಮೆರಿಕಾದ ಅತೀ ಉದ್ದವಾದ ನದಿ - ಅಮೆಜಾನ್

5.ದಕ್ಷಿಣ ಅಮೆರಿಕದ ಕೇಂದ್ರೀಯ ತಗ್ಗು ಪ್ರದೇಶದಲ್ಲಿ ಕಂಡುಬರುವ ಅಮೆಜಾನ್, ಓರಿನೊಕೊ, ಮತ್ತು ಲಾಪ್ಲಾಟಾ ನದಿ ಮುಖಜ ಭೂಮಿಗಳಾಗಿದೆ

6. ಪ್ರಪಂಚದಲ್ಲಿಯೇ ಎತ್ತರದಲ್ಲಿರುವ ಸರೋವರವಾಗಿದೆ ಹಾಗೂ ದಕ್ಷಿಣ ಅಮೆರಿಕದ ನೌಕಾಯಾನಕ್ಕೆ ಸಹಾಯವಾಗಿರುವ ಸರೋವರವಾಗಿದೆ - ಟಿಟಿಕಾಕ ಸರೋವರ ( ಬೊಲಿವಿಯ)



Scanned with OKEN Scanner

Navachethana education YouTube & telegram channel Copy Rights Reserve

7. ದಕ್ಷಿಣ ಅಮೆರಿಕ ಖಂಡಕ್ಕೆ ಸಂಬಂಧಿಸಿದಂತೆ ಯಾವುದು ಸರಿಯಾಗಿದೆ ಗುರುತಿಸಿ

A. ಈ ಖಂಡದ ಉತ್ತರ ಭಾಗದಲ್ಲಿ ಭೂಮಧ್ಯೆ ಮತ್ತು ಈ ರೇಖೆಯು ಹಾದು ಹೋಗುತ್ತದೆ ☑

B. ಈ ಖಂಡದ ದಕ್ಷಿಣ ಭಾಗದಲ್ಲಿ ಮಕರ ಸಂಕ್ರಾಂತಿಯ ವೃತ್ತವು ಹಾದು ಹೋಗಿದೆ ☑

C. ಈ ಖಂಡದಲ್ಲಿ ಅಮೆಜಾನ್ ನದಿಯು ಸಮಭಾಜವೃತ್ತದ ಬಳಿ ಇರುವುದರಿಂದ ಈ ನದಿಯು ಉಷ್ಣ ಮತ್ತು ತೇವಯುತ ವಾಯುಗುಣವನ್ನು ಹೊಂದಿದೆ ☑

ಮೇಲಿನ ಎಲ್ಲವೂ ಸರಿ

8. ಒಂದು ಭೂಭಾಗದ ಜಲರಾಶಿಯು ಬೆಳಗಿನಿಂದಲೇ ಸೂರ್ಯನ ಶಾಖದಿಂದ ಆವಿಯಾಗಿ ಮೇಲೇರಿ, ಮೋಡವಾಗಿ ಅಂದೇ ಅದೇ ಪ್ರದೇಶದಲ್ಲಿ ಮಳೆಯಾಗುವುದಕ್ಕೆ 'ಪರಿಸರಣ ಮಳೆ' ಎನ್ನುತ್ತಾರೆ.

9.ಸಮಭಾಜಕ ವೃತ್ತ ಪ್ರದೇಶದಲ್ಲಿ ಬೀಳುವ ಪರಿಸರಣ ಮಳೆಯನ್ನು ಅಪರಾಹ್ನದ ಮಳೆ, ಚಹ ವಿರಾಮದ ಮಳೆ, ಮತ್ತು 4 ಗಂಟೆಯ ಮಳೆ ಎಂದು ಕರೆಯಲಾಗಿದೆ.

10. ಯಾವ ಮರುಭೂಮಿಯು ಭೂಮಿಯ ಮೇಲಿನ ಅತೀ ಶುಷ್ಕ ಪ್ರದೇಶವಾಗಿದೆ. ಕಳೆದ 200 ವರ್ಷಗಳಿಂದಲೂ ಇಲ್ಲಿ ಮಳೆ ಬಿದ್ದಿಲ್ಲ

- ಅಟಕಾಮ ಮರುಭೂಮಿ



Scanned with OKEN Scanner

Navachethana education YouTube & telegram channel Copy Rights Reserve

11. ಅಮೆಜಾನ್ ಬಯಲಿನ ಸಮಭಾಜಕವೃತ್ತ ಪ್ರದೇಶವು ವಿಶ್ವದ ಅತಿದೊಡ್ಡ ಮಳೆಅರಣ್ಯವಾಗಿದ್ದು, ಸ್ಥಳೀಯವಾಗಿ ಸೆಲ್ವಾಸ್ ಎಂದು ಕರೆಯಲಾಗಿದೆ.

ಅಮೆಜಾನ್ ನದಿ ಅನಕೊಂಡ ಮತ್ತು ಪಿರಾನ್ಹ ಜೀವಿಗಳ ಆವಾಸ ಸ್ಥಾನವಾಗಿದೆ

ದಕ್ಷಿಣ ಅಮೆರಿಕ "ಹುಲ್ಲುಗಾವಲುಗಳ ನಾಡು" GPSTR 2017

- ವೆನಿಜೂಲದ ಲಾನೋಸ್ (Lianos)
- ಬ್ರೆಜಿಲ್‌ನ ಕಾಂಪಾಸ್ (Compos)
- ಅರ್ಜೆಂಟೈನಾದ ಪಂಪಾಸ್ (Pampos)

- ದಕ್ಷಿಣ ಅಮೆರಿಕ ಖಂಡವನ್ನು "ಪಕ್ಷಿಗಳ ಖಂಡ" ಎಂದು ಕರೆಯಲಾಗಿದೆ
- ದಕ್ಷಿಣ ಅಮೆರಿಕದಲ್ಲಿ ಕಾಂಡರ್ ಪ್ರಪಂಚದ ಅತಿ ದೊಡ್ಡ ಪಕ್ಷಿಯಾಗಿದೆ
- ದಕ್ಷಿಣ ಅಮೆರಿಕಾದಲ್ಲಿ ರಿಹಯಾ ಪಕ್ಷಿ ಹಾರಲಾರದ ಒಂದು ದೊಡ್ಡ ಪಕ್ಷಿಯಾಗಿದೆ.
- ಸ್ಟಿಂಗ್ ರೇ, ಎಲೆಕ್ಟ್ರಿಕ್ ಫಿಷ್ ಮತ್ತು ಪಿರಾನ್ಹ ವಿಶ್ವದಲ್ಲೇ ಅತಿ ಅಪಾಯಕಾರಿ ಮೀನುಗಳಾಗಿವೆ.

12. ಬ್ರೆಜಿಲ್‌ನ್ನು ಪ್ರಪಂಚದ ಕಾಫಿಯ ಪಾತ್ರೆ' ಎಂದು ಕರೆಯಲಾಗಿದೆ.

13. ಲಿಯೋಡಿ ಜನ್ಯೆರೊವನ್ನು 'ವಿಶ್ವದ ಕಾಫಿ ಬಂದರು' ಎಂದು ಕರೆಯಲಾಗಿದೆ.



Scanned with OKEN Scanner

Navachethana education YouTube & telegram channel Copy Rights Reserve

# ಆಸ್ಟ್ರೇಲಿಯ

## ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ

### ಸ್ಥಾನ:

- ಆಸ್ಟ್ರೇಲಿಯ ಖಂಡವು ಪೂರ್ಣವಾಗಿ ದಕ್ಷಿಣ ಮತ್ತು ಪೂರ್ವ ಗೋಳಾರ್ಧದಲ್ಲಿದೆ. ಇದು 10° 45' ದಕ್ಷಿಣದಿಂದ 43° 39' ದಕ್ಷಿಣ ಅಕ್ಷಾಂಶ ಹಾಗೂ 113° 9' ಪೂರ್ವದಿಂದ 153° 39' ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ. ಮಕರ ಸಂಕ್ರಾಂತಿ ವೃತ್ತವು ಹೆಚ್ಚು ಕಡಿಮೆ ಈ ಖಂಡದ ಮಧ್ಯಭಾಗದಲ್ಲಿ ಹಾಯ್ದು ಹೋಗಿದೆ.

### ವಿಸ್ತೀರ್ಣ:

- ವಿಸ್ತೀರ್ಣ ಮತ್ತು ಜನಸಂಖ್ಯೆಗಳೆರಡರಲ್ಲೂ ಆಸ್ಟ್ರೇಲಿಯವು ಪ್ರಪಂಚದಲ್ಲಿ ಚಿಕ್ಕ ಭೂಖಂಡ,
- ತಾಸ್ಮೆನಿಯ ದ್ವೀಪವೂ ಸೇರಿದಂತೆ ಇದರ ಒಟ್ಟು ವಿಸ್ತೀರ್ಣ 76,82 ಲಕ್ಷ ಚ.ಕಿ.ಮೀ.ಗಳು. ಅಮೆರಿಕ ಸಂಯುಕ್ತ ಸಂಸ್ಥಾನಕ್ಕಿಂತ ಸ್ವಲ್ಪ ಚಿಕ್ಕದು ಮತ್ತು ಭಾರತಕ್ಕಿಂತ ಎರಡು ಪಟ್ಟು ದೊಡ್ಡದು.
- ಪ್ರಪಂಚದ ಏಳನೆಯ ಭೂಖಂಡವಾಗಿರುವ ಇದು ದಕ್ಷಿಣೋತ್ತರವಾಗಿ 3,940 ಕಿ.ಮೀ. ಉದ್ದ ಮತ್ತು ಪೂರ್ವಪಶ್ಚಿಮವಾಗಿ 4,350 ಕಿ.ಮೀ. ಅಗಲವಾಗಿದೆ. 19,310 ಕಿ.ಮೀ, ತೀರಪದೇಶ ಒಳಗೊಂಡಿದೆ.



Scanned with OKEN Scanner

Navachethana education YouTube & telegram channel Copy Rights Reserve

- ಆಸ್ಟ್ರೇಲಿಯ ಎಂಬ ಪದ ದಕ್ಷಿಣ ಎಂದು ಅರ್ಥ ಕೊಡುವ **'ಆಸ್ಟಲ್'** (ಲ್ಯಾಟಿನ್) ಎಂಬುದರಿಂದ ಬಳಕೆಗೆ ಬಂದಿದೆ.
- ಮಧ್ಯ ಮತ್ತು ದಕ್ಷಿಣ ಪೆಸಿಫಿಕ್ ಸಾಗರದಲ್ಲಿರುವ ಸುಮಾರು **10,000 ದ್ವೀಪ ಸಮೂಹಗಳಗೆ** **'ಓಸೀನಿಯ'**ಎನ್ನುವರು. ಇದರಲ್ಲಿ ಆಸ್ಟ್ರೇಲಿಯ ಖಂಡ ಪ್ರಮುಖವಾದುದು.

## ಭೌಗೋಳಿಕ ಸನ್ನಿವೇಶ:

- ಆಸ್ಟ್ರೇಲಿಯವು **ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್ ಸಾಗರಗಳ ನಡುವೆ ನೆಲೆಸಿರುವ ದ್ವೀಪಖಂಡ.**
- ವಾಯುವ್ಯಕ್ಕೆ- ತೈಮರ್,ಆರಾಪುರ ಸಮುದ್ರಗಳು
- ಈಶಾನ್ಯಕ್ಕೆ - ಟೊರ್ರೆಸ್ ಜಲಸಂಧಿ
- ಆಗ್ನೇಯದಲ್ಲಿ - ತಾಸ್ಮನ್ ಸಮುದ್ರಗಳಿವೆ.
- ದಕ್ಷಿಣದಲ್ಲಿ - ಗ್ರೇಟ್ ಆಸ್ಟ್ರೇಲಿಯನ್ ಬೈಟ್ ಇದೆ.

1.'ಅತ್ಯಂತ ಸಮತಟ್ಟಾದ ಭೂಖಂಡ' ಯಾವುದು - **ಆಸ್ಟ್ರೇಲಿಯ**

2. ಆಸ್ಟ್ರೇಲಿಯವು ಯಾವ ಎರಡು ಸಾಗರಗಳ ನಡುವೆ ನೆಲೆಸಿರುವ ದ್ವೀಪ ಖಂಡವಾಗಿದೆ - **ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್**



Scanned with OKEN Scanner

Navachethana education YouTube & telegram channel Copy Rights Reserve

3. ಆಸ್ಟ್ರೇಲಿಯವನ್ನು ಏನೆಂದು ಕರೆಯುವರು

- ಸಮತಟ್ಟಾದ ಭೂಖಂಡ & ಮರುಭೂಮಿಯ ಭೂಖಂಡ

4. ಆಸ್ಟ್ರೇಲಿಯ ಮೂಲತಃ ಗೊಂಡ್ವಾನ ಭೂರಾಶಿಯ ಒಂದು ಭಾಗವಾಗಿದ್ದು ಅತ್ಯಂತ ಪುರಾತನವಾದುದು.

5. 17 ನೇ ಶತಮಾನದಲ್ಲಿ ಯೂರೋಪಿನ ಜೇಮ್ಸ್ ಕುಕ್‌ನಿಂದ ಕಂಡುಹಿಡಿಯಲ್ಪಟ್ಟ ಆಸ್ಟ್ರೇಯವನ್ನು ಹೊಸ ಭೂಖಂಡವೆನ್ನುವರು.

6. ಗ್ರೇಟ್ ಡಿವೈಡಿಂಗ್ ಸರಣಿಯು ನ್ಯೂಸೌತ್‌ವೇಲ್ಸ್‌ನಲ್ಲಿ ಸಾಕಷ್ಟು ಎತ್ತರವಾಗಿದ್ದು ಕಡಿದಾದ ಇಳಿಜಾರಿನಿಂದ ಕೂಡಿದ್ದು ಇವುಗಳನ್ನು ಏನೆನ್ನುವರು - ಆಸ್ಟ್ರೇಲಿಯಾದ ಆಲ್ಸ್ & ನ್ಯೂ ಇಂಗ್ಲೆಂಡ್ ಸರಣಿ

7. ಆಸ್ಟ್ರೇಲಿಯ ಖಂಡದ ಅತಿ ಎತ್ತರವಾದ ಶಿಖರ

- ಕೊಸಿಯುಸ್ಕೊ (2230 ಮೀ)

8. ಗ್ರೇಟ್ ಬ್ಯಾರಿಯರ್ ರೀಫ್ ' ಕಂಡುಬರುವ ಪ್ರದೇಶ

- ಆಸ್ಟ್ರೇಲಿಯ GPSTR 2015

9. ಪ್ರಪಂಚದ ಪ್ರಸಿದ್ಧ ಆರ್ಟೆಸಿಯನ್ ನೀರಿನ ಬಾವಿಗಳು ಯಾವ ಕಂಡುಬರುವ ಪ್ರದೇಶ

- ಆಸ್ಟ್ರೇಲಿಯ



Scanned with OKEN Scanner

Navachethana education YouTube & telegram channel Copy Rights Reserve

10. ಆಸ್ಟ್ರೇಲಿಯದ ತಗ್ಗು ಮೈದಾನಗಳು ಯಾವುವು

- ಮರ್‍ರೆ ಡಾರ್ಲಿಂಗ್ ಮೈದಾನ
- ಐರ್ ಸರೋವರ ಮೈದಾನ
- ಕಾರ್ಪೆಂಟೇರಿಯ ಮೈದಾನ

11. ಮರೆ ಮತ್ತು ಡಾರ್ಲಿಂಗ್ ನದಿಗಳ ಬಯಲು, ಉತ್ತರದಲ್ಲಿರುವ ಐರ್ ಸರೋವರದಿಂದ ಪ್ರತ್ಯೇಕಗೊಂಡಿದೆ.

12. ಆಸ್ಟ್ರೇಲಿಯ ಅತಿ ಪ್ರಮುಖವಾದ ನದಿ ಯಾವುದು - ಮರ್‍ರೆ

13. ಆಸ್ಟ್ರೇಲಿಯಾದ ಯಾವ ಶಿಲೆ ಪ್ರಪಂಚದ ಅತಿದೊಡ್ಡ ಏಕಶಿಲೆಯಾಗಿದೆ - ಆಯರ್ಸ್ ( ಉಲೂರು )

14. ಆಸ್ಟ್ರೇಲಿಯದ. ಚಿಕ್ಕ ಮತ್ತು ಹೆಚ್ಚು ಉಪ್ಪು ನೀರಿನ ಸರೋವರಗಳು,- ಐರ್, ಟಾರೆನ್ಸ್, ಗೆರ್ಡ್‌ನರ್

15. ಆಸ್ಟ್ರೇಲಿಯದ ಮಧ್ಯದಲ್ಲಿ ಮಕರ ಸಂಕ್ರಾಂತಿ ವೃತ್ತವು ಹಾಯ್ದು ಹೋಗಿದೆ.

16. ಆಸ್ಟ್ರೇಲಿಯಾದಲ್ಲಿ ಚಂಡಮಾರುತಗಳನ್ನು 'ವಿಲ್ಲಿ ವಿಲ್ಲಿಸ್' ಎಂದು ಕರೆಯಲಾಗುತ್ತದೆ.

17. ಆಸ್ಟ್ರೇಲಿಯ ಗುಡ್ಡಗಾಡು ಅರಣ್ಯವೆಂದು ಯಾವ ಕಾಡನ್ನು ಕರೆಯುತ್ತಾರೆ - ಸಮಶೀತೋಷ್ಣವಲಯದ ಕಾಡು



Scanned with OKEN Scanner

Navachethana education YouTube & telegram channel Copy Rights Reserve

18. ಆಸ್ಟ್ರೇಲಿಯದ ಉಷ್ಣವಲಯದ ಹುಲ್ಲುಗಾವಲು ಯಾವುದು

- ಸವನ್ನ

19. ಆಸ್ಟ್ರೇಲಿಯದ ಸಮಶೀತೋಷ್ಣವಲಯದ ಹುಲ್ಲುಗಾವಲು ಯಾವುದು - ಡೌನ್ಸ್

20. ಆಸ್ಟ್ರೇಲಿಯಾದ ಅತಿ ದೊಡ್ಡ ಪಕ್ಷಿ - ಎಮು

21. ಆಸ್ಟ್ರೇಲಿಯಾದ ರಾಷ್ಟ್ರ ಪಕ್ಷಿ ಯಾವುದು - ಕಾಂಗರೂ

22. ಅಪರೂಪದ ಪ್ರಾಣಿ ಪಕ್ಷಿಗಳ ನಾಡು - ಆಸ್ಟ್ರೇಲಿಯ

23. ಆಸ್ಟ್ರೇಲಿಯದ ಪ್ರಮುಖ ಆಹಾರ ಬೆಳೆ ಯಾವುದು - ಗೋಧಿ

24. "ಪಶುಪಾಲನಾ ದೇಶ" ಎಂದೇ ಪ್ರಸಿದ್ಧಿಪಡೆದಿರುವ ದೇಶ ಯಾವುದು - ಆಸ್ಟ್ರೇಲಿಯ

25. ಆಸ್ಟ್ರೇಲಿಯಾದ ಅತ್ಯಂತ ಪ್ರಮುಖ ಆರ್ಥಿಕ ವೃತ್ತಿ

- ಕುರಿ ಸಾಕಣೆಕೆ

- ಕುರಿಗಳಲ್ಲಿ ಸುಮಾರು ಶೇ.75 ಭಾಗ 'ಮೆರಿನೊ' ಜಾತಿಗೆ ಸೇರಿವೆ

26. ಆಸ್ಟ್ರೇಲಿಯ ಒಂದು ಪ್ರಮುಖ ಕಬ್ಬಿಣದ ಅದಿರು ಉತ್ಪಾದಿಸುವ ದೇಶ, ಅತ್ಯಧಿಕ ಪ್ರಮಾಣದ ಕಬ್ಬಿಣದ ಅದಿರು ಜಪಾನಿಗೆ ರಫ್ತಾಗುತ್ತದೆ.



Scanned with OKEN Scanner

Navachethana education YouTube & telegram channel Copy Rights Reserve

27. ಪ್ರಪಂಚದಲ್ಲೇ ಹೆಚ್ಚು ಬಾಕ್ಸೈಟ್ ನಿಕ್ಷೇಪವು ಆಸ್ಟ್ರೇಲಿಯದಲ್ಲಿದೆ. ಪಶ್ಚಿಮ ಆಸ್ಟ್ರೇಲಿಯದ ಕೂಲ್‌ಗಾರ್ಡಿ ಮತ್ತು ಕಾಲ್ಗೊರ್ಲಿಗಳು ಪ್ರಸಿದ್ಧ ಚಿನ್ನ ಉತ್ಪಾದಿಸುವ ಕೇಂದ್ರಗಳಾಗಿವೆ.

TET 2022 ಇಲಾಖೆ ಮಾದರಿ

28. ನ್ಯೂಸೌತ್‌ವೇಲ್ಸ್‌ನಲ್ಲಿ ಹೆಚ್ಚು ತಾಮ್ರ ಉತ್ಪಾದನೆಯಾಗುತ್ತದೆ.

29. ಆಸ್ಟ್ರೇಲಿಯದ ಸಿಡ್ನಿ ಕೈಗಾರಿಕಾ ಪಟ್ಟಣ

## ಅಂಟಾರ್ಟಿಕ

### ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ

❖ ಸ್ಥಾನ :

- ದಕ್ಷಿಣ ಧ್ರುವದ ಸುತ್ತ ವ್ಯಾಪಿಸಿರುವ ಭೂಖಂಡ, ಅಂಟಾರ್ಟಿಕ ವೃತ್ತ ಅಥವಾ 66°30 'ದಕ್ಷಿಣ ಅಕ್ಷಾಂಶದೊಳಗೆ ಹರಡಿರುವ ಖಂಡ. ಉತ್ತರ ಧ್ರುವದಲ್ಲಿರುವ ಆರ್ಕಟಿಕ್ ಸಾಗರಕ್ಕೆ ವಿರುದ್ಧವಾಗಿರುವುದು ಈ ಭೂಖಂಡದ ವೈಶಿಷ್ಟ್ಯ.

❖ ವಿಸ್ತೀರ್ಣ :

- ಅಂಟಾರ್ಟಿಕವು ಪ್ರಪಂಚದ ಐದನೆಯ ದೊಡ್ಡ ಭೂಖಂಡ, ಇದರ ಒಟ್ಟು ವಿಸ್ತೀರ್ಣ 14.2 ಮಿಲಿಯನ್ ಚ.ಕಿ.ಮೀ.ಗಳು, ಇದು ಭಾರತ ಮತ್ತು ಚೀನ ದೇಶಗಳ ವಿಸ್ತೀರ್ಣಕ್ಕಿಂತ ದೊಡ್ಡದು.



Scanned with OKEN Scanner

Navachethana education YouTube & telegram channel Copy Rights Reserve

- ಅಮೆರಿಕ ಸಂಯುಕ್ತ ಸಂಸ್ಥಾನದ ವಿಸ್ತೀರ್ಣದ ಒಂದೂವರೆಯಷ್ಟು ಇದೆ.

## ◈ ಭೌಗೋಳಿಕ ಸನ್ನಿವೇಶ:

- ಅಂಟಾರ್ಟಿಕ ಖಂಡವನ್ನು ಸುತ್ತಲೂ ಜಲರಾಶಿಗಳು ಆವರಿಸಿವೆ. ಈ ಜಲರಾಶಿಯನ್ನು ದಕ್ಷಿಣ ಸಾಗರವೆಂದೇ ಕರೆಯಲಾಗಿದೆ. ಆದರೆ ಇದು ಪ್ರತ್ಯೇಕ ಜಲರಾಶಿಯಲ್ಲ, ಬದಲಾಗಿ ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್ ಮಹಾಸಾಗರಗಳು ಒಂದುಗೂಡಿರುವ ಭಾಗ, ಲ್ಯಾಟಿನ್ ಅಮೆರಿಕದ ದಕ್ಷಿಣದ ತುತ್ತತುದಿಯ ಕೇಪ್‌ಹಾರ್ ಈ ಖಂಡದ ಸಮೀಪಕ್ಕಿರುವ ಭೂಭಾಗ, ಇದು 990 ಕಿ.ಮೀ. ದೂರದಲ್ಲಿದೆ

- **ಪೂರ್ವಕ್ಕೆ**- ಹಿಂದೂ ಮಹಾಸಾಗರ,
- **ಪಶ್ಚಿಮಕ್ಕೆ** - ಪೆಸಿಫಿಕ್ ಮಹಾಸಾಗರ
- **ವಾಯವ್ಯಕ್ಕೆ** - ಅಟ್ಲಾಂಟಿಕ್ ಮಹಾಸಾಗರಗಳಿವೆ.

**1.ಅಂಟಾರ್ಟಿಕ ಖಂಡಕ್ಕೆ ಸಂಬಂಧಿಸಿದಂತೆ ಮೇಲ್ಮೈ ಲಕ್ಷಣಗಳನ್ನು ಸರಿಯಾದ ಅಂಶಗಳನ್ನು ಗುರುತಿಸಿ**

A.ಅಂಟಾರ್ಟಿಕ ಖಂಡದ ಶೇ.98 ಭಾಗ ಹಿಮಾವೃತವಾಗಿದೆ. ಇದರ ಭೂಮೇಲ್ಮ ಲಕ್ಷಣಗಳು ಬಹುವಾಗಿ ಮಂಜುಗಡ್ಡೆ ಹಾಳೆಯಿಂದ ಮುಚ್ಚಿ ಹೋಗಿವೆ.☑

B. ಎತ್ತರವಾದ ಪರ್ವತ ಶಿಖರ ಮತ್ತು ಪ್ರಸ್ಥಭೂಮಿಗಳು ಗೋಚರಿಸುತ್ತವೆ,☑

C. ಮಂಜುಗಡ್ಡೆಯ ಪದರವು ಸುಮಾರು 2,200 ಮೀಟರ್ ಗಳಿಗಿಂತ ಹೆಚ್ಚು ಮಂದವಾಗಿದ್ದು, ಎಲ್ಲೆಡೆಯೂ ಶ್ವೇತವರ್ಣಮಯ, ಹೀಗಾಗಿ ಈ ಖಂಡವನ್ನು 'ಶ್ವೇತ ಖಂಡ',



Scanned with OKEN Scanner

Navachethana education YouTube & telegram channel Copy Rights Reserve

'ಹಿಮದ ಮರುಭೂಮಿ' ಎಂತಲೂ ಹಾಗೂ ಅತ್ಯಂತ ಶೀತವಾಗಿರುವುದರಿಂದ 'ಶೀತಲ ಖಂಡ' ಎಂದೂ ಕರೆಯಲಾಗಿದೆ.☑

D. ಅಂಟಾರ್ಟಿಕ ಖಂಡದಲ್ಲಿ ಪರ್ವತ, ಪ್ರಸ್ಥಭೂಮಿ, ಕಣಿವೆ, ಕಂದರಗಳಂತಹ ಭೂಸ್ವರೂಪಗಳಿವೆ, ಸಮುದ್ರ ಮಟ್ಟಕ್ಕೆ ಸರಾಸರಿ 2,300 ಮೀಟರ್ ಎತ್ತರವುಳ್ಳ ಅಂಟಾರ್ಟಿಕವು ಭೂಗೋಳದ ಎತ್ತರವಾದ ಭೂಖಂಡವಾಗಿದೆ.☑

ಮೇಲಿನ ಎಲ್ಲವೂ ಸರಿಯಾಗಿದೆ

2. ಅಂಟಾರ್ಕಟಿಕ ಖಂಡದಲ್ಲೇ ಎತ್ತರವಾದ ಶಿಖರ

- ಮ್ಯಾಸಿಫ್ (5140 ಮೀ.)

3. ಅಂಟಾರ್ಟಿಕ ಖಂಡದ ಅತಿ ಪ್ರಮುಖ ಜಾಗೃತ ಜ್ವಾಲಾಮುಖಿ

- ರಾಸ್ ದ್ವೀಪದಲ್ಲಿರುವ ಮೌಂಟ್ ಎಲೆಬಸ್

4. ಟ್ರಾನ್ಸ್ ಅಂಟಾರ್ಟಿಕ ಪರ್ವತ ಸರಣಿಗಳ ವಿರುದ್ಧ ಅಂಚಿನಲ್ಲಿ ಇರುವ ಎರಡು ದೊಡ್ಡ ಖಾರಿಗಳು - ರಾಸ್ ಸಮುದ್ರ ಮತ್ತು ವೆಡಲ್ ಸಮುದ್ರ

5. ಅಂಟಾರ್ಟಿಕ ಖಂಡದಲ್ಲಿ ಬರುವ ಪ್ರಮುಖ ಸಸ್ಯಗಳು

- ಪಾಚಿ, ಶಿಲಾವಲ್ಕ ಮತ್ತು ಹಾವಸೆಗಳೇ ಇಲ್ಲಿನ ಪ್ರಮುಖ ಸಸ್ಯಗಳು,



Scanned with OKEN Scanner

Navachethana education YouTube & telegram channel Copy Rights Reserve

6. ಹಿಮಾವೃತವಾದ ಈ ಖಂಡಕ್ಕೆ ಆಗಮಿಸುವ ಹಡಗುಗಳಿಗೆ ಮೊದಲು ಸ್ವಾಗತ ನೀಡುವವೇ ಅದಿಲೆ ಪೆಂಗ್ವಿನ್‌ಗಳು

7. ಅಂಟಾರ್ಟಿಕ ಖಂಡದ ಸಮೀಪದ ದ್ವೀಪಗಳು ಮತ್ತು ಸಮುದ್ರ ತೀರಗಳಲ್ಲಿ ಸೀಲ್ ಸಂತತಿ ಹೆಚ್ಚು ಆರು ಬಗೆಯ ಸೀಲ್‌ಗಳನ್ನು ಗುರುತಿಸಲಾಗಿದೆ.

8. ಪೆಂಗ್ವಿನ್‌ಗಳು ತಮ್ಮ ಸಂತಾನಾಭಿವೃದ್ಧಿಗಾಗಿ ಕಲ್ಲು ಪೊಟರೆಗಳಲ್ಲಿ ನಿರ್ಮಿಸಿಕೊಂಡ ಗೂಡುಗಳಗ 'ರೂಕಲಿ' ಎನ್ನುವರು.

9. ವೋಸ್ಟಾಕ್ ' ಪ್ರಪಂಚದಲ್ಲೇ ಅತ್ಯಂತ ಕಡಿಮೆ ಉಷ್ಣಾಂಶವನ್ನು ದಾಖಲಿಸುವ ಸ್ಥಳ( - 89° ಸೆ )

10. ಚಾರ್ಲ್ಸ್ ವಿಲ್ಸ್ ಅಮೆರಿಕ ಸಂಸ್ಥಾನದ ನೌಕಾಪಡೆಯ ಮುಖ್ಯಸ್ಥ ಖಂಡದ ಅಸ್ತಿತ್ವವನ್ನು ಖಚಿತಪಡಿಸಿದರು

11. 1841 ರಲ್ಲಿ ಬ್ರಿಟನ್ನಿನ ಕ್ಲಾರ್ಕರಾಸ್ ರಾಸ್ ಸಮುದ್ರವನ್ನು ಪತ್ತೆಹಚ್ಚಿದರು

- ಇಂಗ್ಲೆಂಡಿನ ರಾಬರ್ಟ್ ಫಾಲ್ಕನ್ ಸ್ಕಾಟ್ ಈ ಸಮುದ್ರ ದಾಟುವುದರಲ್ಲಿ ಯಶಸ್ವಿಯಾದನು

12. ಅಂಟಾರ್ಟಿಕ ಒಪ್ಪಂದಕ್ಕೆ ಸಹಿ ಹಾಕಿದ ವರ್ಷ



Scanned with OKEN Scanner

Navachethana education YouTube & telegram channel Copy Rights Reserve

- 1 ಡಿಸೆಂಬರ್ 1959
- ಜಾರಿಬಂದ ವರ್ಷ - 23 ಜೂನ್ 1961
- ಈ ಒಪ್ಪಂದದ ಪ್ರಕಾರ ಈ ಖಂಡವು ವೈಜ್ಞಾನಿಕ ಸಂಶೋಧನೆಗಷ್ಟೇ ಮೀಸಲು, ಹೀಗಾಗಿ ಈ ಖಂಡವನ್ನು "ವಿಜ್ಞಾನ ಭೂಖಂಡ" ಎಂತಲೂ ಕರೆಯುತ್ತಾರೆ.

13. ಅಂಟಾರ್ಟಿಕ ಖಂಡದಲ್ಲಿ ಪ್ರಪಂಚದ ಶೇ.90 ಭಾಗದ ಸಿಹಿನೀರು ಮಂಜುಗಡ್ಡೆಯ ರೂಪದಲ್ಲಿದೆ

14. ಭಾರತೀಯ ತಂಡ ಸ್ಥಾಪಿಸಿದ ಮೊದಲ ಸಂಶೋಧನಾ ಕೇಂದ್ರದ ಹೆಸರು - ದಕ್ಷಿಣ ಗಂಗೋತ್ರಿ

15. ಭಾರತೀಯ ತಂಡ ಸ್ಥಾಪಿಸಿದ ಎರಡನೆಯ ಸಂಶೋಧನೆ ಕೇಂದ್ರ

- ಮೈತ್ರಿ

16. ಸಿಹಿನೀರಿನ ಪೂರೈಕೆಗಾಗಿ "ಪ್ರಿಯದರ್ಶಿನಿ" ಎಂಬ ಸರೋವರವನ್ನು ಭಾರತ ನಿರ್ಮಿಸಿದೆ.

17. ಅಂಟಾರ್ಟಿಕದಲ್ಲಿ ಭಾರತದ ಸಂಶೋಧನಾ ಕೇಂದ್ರಗಳ ಹೆಸರನ್ನು ತಿಳಿಸಿರಿ.

GPSTR 2019

- ದಕ್ಷಿಣ ಗಂಗೋತ್ರಿ
- ಮೈತ್ರಿ
- ಭಾರತಿ

NAVACHETANA EDUCATIONS
7019752139



Scanned with OKEN Scanner

Navachethana education YouTube & telegram channel Copy Rights Reserved

## ಇತಿಹಾಸ

# ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

NAVACHETANA EDUCATIONS
7019752139

**1.** ಬ್ರಹ್ಮ ಸಮಾಜ ಸ್ಥಾಪನೆಯಾದ ವರ್ಷ - **1828**

**2.** ಭಾರತದ ಪುನರುಜ್ಜೀವನ ಪಿತಾಮಹ - ರಾಜಾ ರಾಮಮೋಹನ ರಾಯ್

**3.** ರಾಜರಾಮ್ ಮೋಹನ್ ರಾಯ್‌ರನ್ನು 'ಭಾರತದ ನವೋದಯದ ಪಿತಾಮಹ' ಎಂದು ಕರೆದಿರುವುದು ಯಾರು

- ರವೀಂದ್ರನಾಥ ಟ್ಯಾಗೋರ್

**4.** ರಾಜಾ ರಾಮಮೋಹನ್ ರಾಯರು 'ಆತ್ಮೀಯ ಸಭಾ'ವನ್ನು ಸ್ಥಾಪಿಸಿದ ವರ್ಷ - **1814**

**5.** **1828** ರಲ್ಲಿ ಬ್ರಹ್ಮ ಸಮಾಜವನ್ನು ಸ್ಥಾಪಿಸಿದವರು

- ರಾಜಾ ರಾಮಮೋಹನ ರಾಯ್

**6.** 'ಸತಿ ಪದ್ಧತಿ 'ಆಚರಣೆಯನ್ನು ನಿಷೇಧಿಸಿದ ಗವರ್ನರ್ ಜನರಲ್ ಯಾರು - ವಿಲಿಯಂ ಬೆಂಟಿಂಕ್

**7.** ವಿಲಿಯಂ ಬೆಂಟಿಂಕ್ ಸತಿ ಪದ್ಧತಿ ಆಚರಣೆಯನ್ನು ನಿಷೇಧಿಸಿದ ವರ್ಷ

**- 1829**



Scanned with OKEN Scanner

Navachethana education YouTube & telegram channel Copy Rights Reserved

8. ರಾಮಮೋಹನ ರಾಯ್ ಅವರು ಯಾವ ಪತ್ರಿಕೆಯ ಮೂಲಕ ಸಾಮಾಜಿಕ ಸುಧಾರಣಾ ಚಳವಳಿಯ ಪ್ರಕ್ರಿಯೆಯನ್ನು ಆರಂಭಿಸಿದರು

- 'ಸಂವಾದ ಕೌಮುದಿ'

9.ರಾಮಮೋಹನ ರಾಯ್ ರವರಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ

A.ರಾಮಮೋಹನ ರಾಯ್ ಇಂಗ್ಲಿಷ್ ಶಿಕ್ಷಣವನ್ನು ಪ್ರತಿಪಾದಿಸಿದ ಮೊದಲಿಗರಲ್ಲಿ ಒಬ್ಬರು.☑

B.ತಮ್ಮ ಖರ್ಚಿನಲ್ಲಿ ಇಂಗ್ಲಿಷ್ ಶಾಲೆ ನಡೆಸುತ್ತಿದ್ದರು, ಅವರು ವೇದಾಂತ ಕಾಲೇಜನ್ನು ಕೂಡ ಸ್ಥಾಪಿಸಿದರು.☑

C.ರಾಮಮೋಹನ ರಾಯ್ ಭಾರತೀಯ ಪತ್ರಿಕೋದ್ಯಮದ ಆದ್ಯ ಪ್ರವರ್ತಕರಲ್ಲಿ ಒಬ್ಬರಾಗಿದ್ದಾರೆ. ಹಲವು ನಿಯತಕಾಲಿಕೆಗಳನ್ನು ಅವರು ಪ್ರಕಟಿಸಿದರು☑

D.ಸಮಾಜಮುಖಿ ಕಾರ್ಯಗಳನ್ನು ಮುಂದೆ ದೇವೇಂದ್ರನಾಥ ಟಾಗೋರ್ ಮತ್ತು ಕೇಶವ ಚಂದ್ರ ಸೇನ್ ಮುಂದುವರಿಸಿದರು.☑

ಮೇಲಿನ ಎಲ್ಲವೂ ಸರಿ ಇದೆ

10. 'ರಾಜಾ' ಎಂಬುದು ರಾಮಮೋಹನ ರಾಯ್ ಅವರಿಗೆ ಮೊಗಲ್ ಬಾದಷಹ 1829ರಲ್ಲಿ ನೀಡಿದ ಬಿರುದಾಗಿತ್ತು.

11. ಪ್ರಾರ್ಥನಾ ಸಮಾಜ ಸ್ಥಾಪನೆಯಾದ ವರ್ಷ - (1867)



Scanned with OKEN Scanner

Navachethana education YouTube & telegram channel Copy Rights Reserved

12. ಪ್ರಾರ್ಥನಾ ಸಮಾಜವನ್ನು ಸ್ಥಾಪಿಸಿದವರು - ಆತ್ಮಾರಾಮ್ ಪಾಂಡುರಂಗ

13. ಕೆಳಗಿನ ಹೇಳಿಕೆಗಳನ್ನು ಗಮನಿಸಿ.

A.ಇವರು ವಿಧವಾ ವಿವಾಹ, ಅಂತರ್ಜಾತಿ ವಿವಾಹ, ಮಹಿಳೆಯರ ಸ್ಥಾನಮಾನದ ಉನ್ನತೀಕರಣ ಮತ್ತು ಶೋಷಿತ ವರ್ಗದವರ ಅಭಿವೃದ್ಧಿಯ ಕಡೆಗೆ ಗಮನ ಹರಿಸಿದರು.

B.ಅಲ್ಲದೆ ನಿರ್ಗತಿಕರಿಗೆ ಮತ್ತು ಅನಾಥರಿಗೆ ಆಶ್ರಮಗಳನ್ನು ಸ್ಥಾಪಿಸಿದರು. ವಿಧವೆಯರ ಉದ್ಧಾರಕ್ಕಾಗಿ ಶಿಕ್ಷಣ ಸಂಸ್ಥೆಗಳನ್ನು ತೆರೆದರು.

ಮೇಲಿನ ಹೇಳಿಕೆಗಳು ಸಂಬಂಧಿಸಿರುವುದು

- ಮಹಾದೇವ ಗೋವಿಂದ ರಾನಡೆ

14. ಸತ್ಯ ಶೋಧಕ ಸಮಾಜವನ್ನು ಸ್ಥಾಪಿಸಿದವರು

- ಜ್ಯೋತಿಬಾ ಫುಲೆ

15. ಸತ್ಯ ಶೋಧಕ ಸಮಾಜ ಸ್ಥಾಪನೆಯಾದ ವರ್ಷ - 1873

16. 'ಗುಲಾಮಗಿರಿ' ಎಂಬ ಕೃತಿಯನ್ನು ರಚಿಸಿ ತಮ್ಮ ಚಿಂತನೆಗಳನ್ನು ಸಂವಾದದ ರೂಪದಲ್ಲಿ ವಿವರಿಸಿದವರು ಯಾರು - ಜ್ಯೋತಿಬಾ ಫುಲೆ

17. ಯಾರ ಜೊತೆಗೂಡಿ ಜ್ಯೋತಿಬಾ ಫುಲೆ ಪುಣೆಯಲ್ಲಿ ಬಾಲಕಿಯರ ಶಾಲೆಯನ್ನು ಆರಂಭಿಸಿದರು

- ಪತ್ನಿ ಸಾವಿತ್ರಿಬಾಯಿ



Scanned with OKEN Scanner

Navachethana education YouTube & telegram channel Copy Rights Reserved

18. 1863ರಲ್ಲಿ ಪುನರ್ವಸತಿ ಕೇಂದ್ರವನ್ನು ತೆರೆಯುವ ಮೂಲಕ ನಡೆಯುತ್ತಿದ್ದ ಶಿಶುಹತ್ಯೆ ಪ್ರಕರಣಗಳನ್ನು ಕೊನೆಗಾಣಿಸುವ ಪ್ರಯತ್ನ ಮಾಡಿದವರು - ಜ್ಯೋತಿಬಾ ಪುಲೆ

19. ಡಾ.ಬಿ.ಆರ್.ಅಂಬೇಡ್ಕರ್ ಅವರು ಯಾರನ್ನು ತಾತ್ವಿಕ ಮಾರ್ಗದರ್ಶಕರನ್ನಾಗಿ ಸ್ವೀಕರಿಸಿದ್ದರು - ಜ್ಯೋತಿಬಾ ಪುಲೆ

20. 'ಯುವ ಬಂಗಾಳಿ ಚಳವಳಿ'(ಡಿರೀಜಿಯನ್ ಚಳವಳಿ) ಗೆ ಕಾರಣರಾದವರು ಯಾರು - ಹೆನ್ರಿ ವಿವಿಯನ್ ಡಿರೋಜಿಯೊ

21. ಆರ್ಯ ಸಮಾಜವನ್ನು ಸ್ಥಾಪಿಸಿದವರು - ದಯಾನಂದ ಸರಸ್ವತಿ

22. ಆರ್ಯ ಸಮಾಜ ಸ್ಥಾಪನೆಯಾದ ವರ್ಷ - 1875

23. ದಯಾನಂದ ಸರಸ್ವತಿಯವರ ಮೊದಲ ಹೆಸರೇನು

- ಮೂಲಶಂಕರ

24. "ವೇದಗಳಿಗೆ ಹಿಂತಿರುಗಿ" ಎಂದು ಕರೆ ನೀಡಿದವರು ಯಾರು

- ದಯಾನಂದ ಸರಸ್ವತಿ

25. ದಯಾನಂದ ಸರಸ್ವತಿಯವರು ರಚಿಸಿದ ಕೃತಿ

- 'ಸತ್ಯಾರ್ಥ ಪ್ರಕಾಶ'



Scanned with OKEN Scanner

Navachethana education YouTube & telegram channel Copy Rights Reserved

26. ಲಾಹೋರಿನಲ್ಲಿ "ದಯಾನಂದ ಆಂಗ್ಲೋವೇದಿಕ್ ಶಾಲೆ" (DIA.V.1886) ಯನ್ನು ಸ್ಥಾಪಿಸಿದವರು - ಲಾಲಾ ಹಂಸರಾಜ್

27. ಮತಾಂತರಗೊಂಡಿದ್ದವರನ್ನು ಮತ್ತೆ ಹಿಂದೂ ಧರ್ಮಕ್ಕೆ ಕರೆತರುವುದಕ್ಕಾಗಿ "ಶುದ್ಧಿ ಚಳವಳಿ"ಯನ್ನು ಆರಂಭಿಸಿದವರು

- ದಯಾನಂದರ ಶಿಷ್ಯರಾದ ಶ್ರದ್ಧಾನಂದರು

28. "ಏಳಿ! ಎದ್ದೇಳಿ! ಗುರಿಮುಟ್ಟುವ ತನಕ ನಿಲ್ಲದಿರಿ" ಇದು ಸ್ವಾಮಿ ವಿವೇಕಾನಂದರು ಭಾರತೀಯ ಯುಜನತೆಗೆ ನೀಡಿದ ಕರೆಯಾಗಿದೆ ಇವರ ಮೊದಲ ಹೆಸರು

- ನರೇಂದ್ರನಾಥ ದತ್ತ

29. ಸ್ವಾಮಿ ವಿವೇಕಾನಂದರು ಜನಿಸಿದ ವರ್ಷ - 1863 ಜನವರಿ 12

30.ಯಾರು ಸ್ವಾಮಿ ವಿವೇಕಾನಂದರ ಗುರು ಆಗಿದ್ದರು

- ರಾಮಕೃಷ್ಣ ಪರಮಹಂಸ

31. 1892 ರಲ್ಲಿ ಯಾರ ಸಲಹೆಯ ಮೇರೆಗೆ ನರೇಂದ್ರನಾಥ ದತ್ತರ ಹೆಸರು ಸ್ವಾಮಿ ವಿವೇಕಾನಂದ' ಎಂದು ನಾಮಕರಣವಾಯಿತು.

- ಖೇತ್ರಿಯ ರಾಜರ

32. ಅಮೆರಿಕದ ಚಿಕಾಗೋ ವಿಶ್ವ ಧರ್ಮ ಸಮ್ಮೇಳನ ನಡೆದ ವರ್ಷ

- 1893



Scanned with OKEN Scanner

Navachethana education YouTube & telegram channel Copy Rights Reserved

33. 1856ರಲ್ಲಿ ಮೊದಲಬಾರಿಗೆ ಮೇಲ್ವರ್ಗದಲ್ಲಿ ಕಾನೂನುಬದ್ಧ ವಿಧವಾ ಪುನರ್ ವಿವಾಹವು ಕೊಲ್ಕತಾದಲ್ಲಿ ಯಾರ ನೇತೃತ್ವದಲ್ಲಿ ನಡೆಯಿತು

- ಈಶ್ವರಚಂದ್ರ ವಿದ್ಯಾಸಾಗರ

34. "ಸ್ತ್ರೀಯರ ಉದ್ಧಾರ ನಮ್ಮ ರಾಷ್ಟ್ರದ ಉದ್ಧಾರ" ಎಂದು ಒತ್ತಿಹೇಳಿದವರು

- ಸ್ವಾಮಿ ವಿವೇಕಾನಂದರು

35. ಸ್ವಾಮಿ ವಿವೇಕಾನಂದರನ್ನು ಕುರಿತು ಯಾರು "ಭಾರತದ ರಾಷ್ಟ್ರೀಯತೆಯ ನಿಜವಾದ ಪಿತಾಮಹ" ಎಂದು ಬಣ್ಣಿಸಿದ್ದಾರೆ

- ಬಾಲ ಗಂಗಾಧರ ತಿಲಕರು

36. ಸ್ವಾಮಿ ವಿವೇಕಾನಂದರನ್ನು ಯಾರು ತಮ್ಮ ಅರಮನೆಗೆ ಆಹ್ವಾನಿಸಿ ಸಮ್ಮೇಳನಕ್ಕೆ ಹೋಗಲು ಧನ ಸಹಾಯ ನೀಡಿದರು - 10 ನೇ ಚಾಮರಾಜ ಒಡೆಯರ್

37. ಥಿಯೋಸಾಫಿಕಲ್ ಸೊಸೈಟಿಯನ್ನು(1875) ಸ್ಥಾಪಿಸಿದವರು

- ಮೇಡಂ ಬ್ಲಾವಟ್ ಸ್ಕಿ & ಕರ್ನಲ್ ಎಚ್. ಎಸ್ ಆಲ್ಕಾಟ್

38. ಥಿಯೋಸಾಫಿಕಲ್ ಸೊಸೈಟಿಯ ಅಂತರ್‌ರಾಷ್ಟ್ರೀಯ ಕೇಂದ್ರ ಭಾರತದಲ್ಲಿ ಎಲ್ಲಿತ್ತು - ಚೆನ್ನೈ ಬಳಿಯ ಅಡಯಾರ್



Scanned with OKEN Scanner

Navachethana education YouTube & telegram channel Copy Rights Reserved

**39. ಭಾರತದಲ್ಲಿ ಥಿಯೋಸಾಫಿಕಲ್ ಸೊಸೈಟಿಯ ಚಟುವಟಿಕೆಗಳಿಗೆ ಹೊಸ ರೂಪ ನೀಡಿದ ಐಲ್ಲೆಂಡ್ ಮಹಿಳೆ - ಅನಿಬೆಸೆಂಟ್**

**40. ಕೆಳಗಿನ ಹೇಳಿಕೆಗಳನ್ನು ಗಮನಿಸಿ.**

A.ಭಾರತೀಯ ಸಂಸ್ಕೃತಿಯಿಂದ ಪ್ರಭಾವಿತರಾಗಿದ್ದ ಅವರು ಭಗವದ್ಗೀತೆಯನ್ನು ಇಂಗ್ಲಿಷ್ ಭಾಷೆಗೆ ಅನುವಾದ ಮಾಡಿದರು.

B.'ನ್ಯೂ ಇಂಡಿಯಾ' ಮತ್ತು 'ಕಾಮನ್‌ವೆಲ್ತ್' ಎಂಬ ಪತ್ರಿಕೆಗಳನ್ನು ಹೊರಡಿಸಿದರು.

C.ಭಾರತದಲ್ಲಿ ಥಿಯಸಾಫಿಕಲ್ ಚಳವಳಿಯ ಕೇಂದ್ರ ಶಕ್ತಿಯಾಗಿ ಮುನ್ನಡೆಸಿದರು.

**ಮೇಲಿನ ಹೇಳಿಕೆಗಳು ಸಂಬಂಧಿಸಿರುವುದು**

- **ಅನಿಬೆಸೆಂಟ್**

**41. ಅನಿಬೆಸೆಂಟ್ ರವರಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ**

A.ಅನಿಬೆಸೆಂಟ್ ಬನಾರಸ್‌ನಲ್ಲಿ ಸೆಂಟ್ರಲ್ ಹಿಂದೂ ಕಾಲೇಜನ್ನು ಸ್ಥಾಪಿಸಿದರು.☑

B. ಇದೇ ಮುಂದೆ ಬನಾರಸ್ ಹಿಂದೂ ಯುನಿವರ್ಸಿಟಿ (B.H.U.) ಎಂಬ ಹೆಸರನ್ನು ಪಡೆಯಿತು. ಅವರು ಮುಂದೆ ಹೋಂರೂಲ್ ಚಳವಳಿಯನ್ನು ಸಹ ಆರಂಭಿಸಿದರು.☑

C.ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಮೊದಲ ಮಹಿಳಾ ಅಧ್ಯಕ್ಷೆಯಾಗಿದ್ದರು (1917)☑

**ಮೇಲಿನ ಎಲ್ಲವೂ ಸರಿಯಾಗಿದೆ**



Scanned with OKEN Scanner

Navachethana education YouTube & telegram channel Copy Rights Reserved

**41.ಅಲಿಘರ್ ಚಳವಳಿಯ ನಾಯಕತ್ವ ವಹಿಸಿದವರು**

- ಸರ್ ಸಯ್ಯದ್ ಅಹ್ಮದ್ ಖಾನ್

**42. 1863ರಲ್ಲಿ 'ಮಹಮಡನ್ ಲಿಟರರಿ ಸೊಸೈಟಿ' ಸ್ಥಾಪಿಸಿದವರು**

- ನವಾದ್ ಅಬ್ದುಲ್ ಲತೀಫ್

**43. 1875ರಲ್ಲಿ ಮಹಮಡನ್ ಆಂಗ್ಲೋ ಓರಿಯಂಟಲ್ ಕಾಲೇಜನ್ನು ಆರಂಭಿಸಿದವರು -** ಸರ್ ಸಯ್ಯದ್ ಅಹ್ಮದ್ ಖಾನ್

- ಸಂಸ್ಥೆಯೇ 1920ರಲ್ಲಿ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು.

**44. "ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ"(1903) ಎಂಬ ಸಂಸ್ಥೆಯನ್ನು ಸ್ಥಾಪಿಸಿದವರು -** ಶ್ರೀ ನಾರಾಯಣಗುರು

**45. "ಒಬ್ಬ ದೇವರು, ಒಂದು ಧರ್ಮ ಮತ್ತು ಒಂದು ಜಾತಿ" ಈ ಹೇಳಿಕೆಯನ್ನು ನೀಡಿದವರು -** ಶ್ರೀ ನಾರಾಯಣಗುರು



Scanned with OKEN Scanner

Navachethana education YouTube & telegram channel Copy Rights Reserved

## ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857-58)

1.'ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ'ವು ನಡೆದ ವರ್ಷ

- 1857

2.1857ರ ಹೋರಾಟವನ್ನು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಮೊದಲು ಯಾರು ಕರೆದರು

- ಭಾರತದ ರಾಷ್ಟ್ರೀಯ ಇತಿಹಾಸಕಾರರು

3. 1857ರ ದಂಗೆ'ಯನ್ನು 'ಸಿಪಾಯಿಗಳ ದಂಗೆ' ಎಂದು ವರ್ಣಿಸಿದವರು

- ಬ್ರಿಟಿಷರು

4. "ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯನ್ನು ಜಾರಿಗೊಳಿಸಿದವನು

- ಲಾರ್ಡ್ ಡಾಲ್ ಹೌಸಿ

5. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿನಿಂದ ಬ್ರಿಟಿಷರ ವಶವಾದ ಪ್ರದೇಶಗಳು -

ಸಾತಾರ, ಜೈಪುರ, ಸಂಬಲ್‌ಪುರ, ಉದಯಪುರ, ಝೂನ್ಸಿ, ಅವಧ್

6. ದಂಗೆಯ ಸಮಯದಲ್ಲಿ ಭಾರತೀಯ ಸಿಪಾಯಿಗಳು ಯಾರನ್ನು 'ಭಾರತದ ಚಕ್ರವರ್ತಿ' ಎಂದು ಘೋಷಿಸಿದರು - 2ನೇ ಬಹಾದೂರ್ ಷಹ



Scanned with OKEN Scanner

Navachethana education YouTube & telegram channel Copy Rights Reserved

7."ಬಿಳಿಯರ ಮೇಲಿನ ಹೊರೆ" ಸಿದ್ಧಾಂತವನ್ನು ಕೊಟ್ಟವನು

- ರುಡ್‌ಯಾರ್ಡ್ ಕಿಪ್ಲಿಂಗ್

8. 1857ರ ಹೋರಾಟದ ತಕ್ಷಣದ ಕಾರಣ ಯಾವುದಾಗಿತ್ತು

- 1857ರಲ್ಲಿ ಒಂದು ಹೊಸ ಮಾದರಿಯ ಬಂದೂಕನ್ನು (ಎನ್ ಫೀಲ್ಡ್ ರೈಫಲ್) ಸೇನೆಯಲ್ಲಿ ತೊಡಗಿಸಿದ್ದು ಸಿಪಾಯಿ ದಂಗೆಗೆ ತಕ್ಷಣದ ಕಾರಣವಾಯಿತು.

9. ಮೀರತ್‌ನಲ್ಲಿ ದಂಗೆಯು 1857ರ ಮೇ 10ರಂದು ಆರಂಭವಾಯಿತು.

- ಪರಂಗಿ ಪದವು ಪರ್ಷಿಯನ್ ಮೂಲವಾಗಿದೆ. ಇದನ್ನು ಉರ್ದು ಮತ್ತು ಹಿಂದಿಗಳಲ್ಲ ಯುರೋಪಿಯನ್ನರನ್ನು ಕೀಳಾಗಿ ಸೂಚಿಸಲು ಬಳಸಲಾಗುತ್ತಿತ್ತು.

## 1857 ರ ದಂಗೆಯ ಗತಿ - ನಾಯಕರು

1. ಬ್ಯಾರಕ್ ಪುರ - ಮಂಗಲ್‌ಪಾಂಡೆ
2. ದಿಲ್ಲಿ - ಸೇನಾಪತಿ ಬಕ್ತ್ ಖಾನ್, ಭಾರತದ ಬಹದ್ದೂರ್ ಷಾ 2ನೇ ಚಕ್ರವರ್ತಿಯನ್ನು ಘೋಷಣೆ
3. ಬಿಹಾರ - ಕುಂವರ್ ಸಿಂಗ್
4. ಕಾನ್ಪುರ - ನಾನಾ ಸಾಹೇಬ್ ಮತ್ತು ತ್ಯಾತ್ಯಾಟೋಪೆ
5. ಲಕ್ನೋ - ಬೇಗಂ ಹಜರತ್ ಮಹಲ್
6. ಝಾನ್ಸಿ - ರಾಣಿ ಲಕ್ಷ್ಮೀಬಾಯಿ



Scanned with OKEN Scanner

Navachethana education YouTube & telegram channel Copy Rights Reserved

7. ಫೈಜಾಬಾದ್ - ಮೌಲ್ವಿ ಅಹಮದುಲ್ಲಾ

## ಕರ್ನಾಟಕದಲ್ಲಿ ದಂಗೆಯ ಗತಿ - ನಾಯಕರು

1. ಮುಂಡರಗಿ - ಭೀಮ್ ರಾವ್
2. ಹಲಗಲಿ - ಬೇಡ ಜನಾಂಗದವರು
3. ಸುರಪುರದ - ವೆಂಕಟಪ್ಪ ನಾಯಕ
4. ನರಗುಂದದ - ಬಾಬಾಸಾಹೇಬ

10. 'ಭಾರತದ ಮ್ಯಾಗ್ನಕಾರ್ಟ' ಎಂದು ಹೆಸರಾದ ಘೋಷಣೆ ಯಾವುದು

- **1858ರ ವಿಕ್ಟೋರಿಯಾ ರಾಣಿಯ ಘೋಷಣೆ**

## ಸ್ವಾತಂತ್ರ್ಯ ಸಂಗ್ರಾಮ

## ಸ್ವಾತಂತ್ರ್ಯ ಚಳವಳಿ (1885-1919)

ಭಾರತದ ರಾಷ್ಟ್ರೀಯ ಕಾಂಗ್ರೇಸ್ ಸ್ಥಾಪನೆಯಾದ ವರ್ಷ

**-1885**

- ಎ.ಓ. ಹ್ಯೂಮ್ ಕಾಂಗ್ರೆಸಿನ ಸ್ಥಾಪಕರು
- ಉಮೇಶಚಂದ್ರ ಬ್ಯಾನರ್ಜಿ ಪ್ರಥಮ ಅಧಿವೇಶನದ ಅಧ್ಯಕ್ಷರು



Scanned with OKEN Scanner

Navachethana education YouTube & telegram channel Copy Rights Reserved

**1.ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ಸಂಬಂಧಿಸಿದೆ ?**

A.ಭಾರತ ರಾಷ್ಟ್ರೀಯ ಕಾಂಗ್ರೆಸ್ ನಿವೃತ್ತ ಬ್ರಿಟಿಷ್ ನಾಗರಿಕ ಸೇವಾಧಿಕಾರಿ ಎಲನ್ ಆಕ್ಟೇವಿಯನ್ ಹ್ಯೂಮ್ ಅವರ ಕನಸಿನ ಕೂಸಾಗಿತ್ತು.☑

B.ಇದು 1885ರಲ್ಲಿ ಮುಂಬೈಯಲ್ಲಿ ಸ್ಥಾಪಿತವಾಯಿತು. ಉಮೇಶಚಂದ್ರ ಬ್ಯಾನರ್ಜಿಯವರು ಕಾಂಗ್ರೆಸಿನ ಮೊದಲ ಅಧ್ಯಕ್ಷರಾಗಿದ್ದರು.☑

C. ಮುಂಬೈಯಲ್ಲಿ ನಡೆದ ಕಾಂಗ್ರೆಸಿನ ಮೊದಲ ಅಧಿವೇಶನದಲ್ಲಿ 72 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು.☑

D.ಅವರಲ್ಲಿ ಹೆಚ್ಚಿನವರು ವಕೀಲರು, ಪತ್ರಕರ್ತರು ಮತ್ತು ಸಮಾಜದ ಪ್ರತಿಷ್ಠಿತ ವರ್ಗದವರಾಗಿದ್ದರು. ವಾಸ್ತವವಾಗಿ ಕಾಂಗ್ರೆಸ್ ರಾಷ್ಟ್ರೀಯ ಚಳವಳಿಗೆ ಚಾಲನೆ ನೀಡಿದ ಮೊದಲ ರಾಜಕೀಯ ವೇದಿಕೆಯಾಗಿತ್ತು.☑

ಮೇಲಿನ ಎಲ್ಲವೂ ಸರಿಯಾಗಿದೆ

### ❖ ಮಂದಗಾಮಿಗಳ ಯುಗ (1885-1905)

ಭಾರತ ರಾಷ್ಟ್ರೀಯ ಕಾಂಗ್ರೆಸಿನ ಆರಂಭಿಕ ನಾಯಕರುಗಳನ್ನು ಮಂದಗಾಮಿಗಳು (ಸೌಮ್ಯವಾದಿಗಳು) ಎಂದು ಕರೆಯಲಾಗಿದೆ. 1885ರಿಂದ 1905ರ ನಡುವಿನ ಕಾಲಘಟ್ಟವನ್ನು ಮಂದಗಾಮಿಗಳ ಕಾಲ ಎಂದು ಪರಿಗಣಿಸಲಾಗಿದೆ.



Scanned with OKEN Scanner

Navachethana education YouTube & telegram channel Copy Rights Reserved

2.ಮಂದಗಾಮಿಗಳ ಸರಿಯಾದ ಗುಂಪನ್ನು ಗುರುತಿಸಿ

- ದಾದಾಭಾಯ್ ನವರೋಜಿ
- ಸುರೇಂದ್ರನಾಥ ಬ್ಯಾನರ್ಜಿ
- ಗೋಪಾಲಕೃಷ್ಣ ಗೋಖಲೆ
- ಮಹಾದೇವ ಗೋವಿಂದ ರಾನಡೆ

### ತೀವ್ರಗಾಮಿಗಳ ಯುಗ (1905-1919)

ಮಂದಗಾಮಿಗಳು ಸಾಮಾನ್ಯ ಜನತೆಯನ್ನು ತಲಗಲಿಲ್ಲ. ಅವರು ಅನುಸರಿಸಿದ ಪ್ರಾರ್ಥನೆ ಮತ್ತು ಮನವಿ ನೀತಿಗಳನ್ನು 'ತಿರುಪೆಯ ನೀತಿ' (ಪಾಲಿಸಿ ಆಫ್ ಮೆಂಡಿಕೆನ್ಸಿ ) ಎಂದು ತೀವ್ರವಾದಿಗಳು ವ್ಯಂಗ್ಯವಾಡಿದರು.

3. ತೀವ್ರಗಾಮಿಗಳ ಸರಿಯಾದ ಗುಂಪನ್ನು ಗುರುತಿಸಿ

- ಲಾಲಾ ಲಜಪತ್ ರಾಯ್
- ಬಾಲಗಂಗಾಧರ ತಿಲಕ್
- ಬಿಪಿನ್ ಚಂದ್ರ ಪಾಲ್

ಇವರು ತೀವ್ರಗಾಮಿ ಗುಂಪಿನ ನಾಯಕರಾಗಿದ್ದು ಲಾಲ್ -ಬಾಲ್ - ಪಾಲ್ ಎಂದೇ ಜನಪ್ರಿಯರಾಗಿದರೆ



Scanned with OKEN Scanner

Navachethana education YouTube & telegram channel Copy Rights Reserved

**4. ಬಾಲಗಂಗಾಧರ ತಿಲಕ್ ರವರಿಗೆ ಸಂಬಂಧಿಸಿದಂತೆ**

**ಈ ಕೆಳಗಿನವುಗಳಲ್ಲಿ ಯಾವುದು ಸಂಬಂಧಿಸಿದೆ ?**

**A.**ಬಾಲಗಂಗಾಧರ ತಿಲಕರು ಒಬ್ಬ ಅಪ್ರತಿಮ ದೇಶಭಕ್ತ. "ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ನಾನು ಅದನ್ನು ಪಡೆದೇ ತೀರುತ್ತೇನೆ", ಎಂಬ ಅವರ ಘೋಷಣೆಯಲ್ಲಿ ಸ್ವಾತಂತ್ರ್ಯದ ಉತ್ಕಟತೆಯಿತ್ತು,

**B.**ಜನರನ್ನು ಒಗ್ಗೂಡಿಸುವ ದೃಷ್ಟಿಯಿಂದ ತಿಲಕರು ಗಣೇಶ ಮತ್ತು ಶಿವಾಜಿ ಉತ್ಸವಗಳನ್ನು ಪರಿಚಯಿಸಿದರು.

**C.**'ಮರಾಠ' (ಇಂಗ್ಲಿಷ್) ಮತ್ತು 'ಕೇಸರಿ' (ಮರಾಠಿ) ಪತ್ರಿಕೆಗಳನ್ನು ಪ್ರಕಟಿಸುವ ಮೂಲಕ ಜನರನ್ನು ರಾಜಕೀಯವಾಗಿ ಪ್ರೇರೇಪಿಸಿದರು.

**ಮೇಲಿನ ಎಲ್ಲವೂ ಸರಿಯಾಗಿದೆ**

**5. ಹೊಂದಿಸಿ ಬರೆಯಿರಿ**

**A.ಬಿಪಿನ್ ಚಂದ್ರ ಪಾಲ್ - 'ನ್ಯೂ ಇಂಡಿಯಾ'**

**B. ಅರವಿಂದ ಘೋಷ್ - 'ವಂದೇ ಮಾತರಂ' ಪತ್ರಿಕೆ**

**C.ಲಾಲಾ ಲಜಪತ್ ರಾಯ್ - 'ಪಂಜಾಬಿನ ಸಿಂಹ'**

**6. "ನಾವು ಸ್ವರಾಜ್ಯವನ್ನು ಹಕ್ಕಿನ ರೂಪದಲ್ಲಿ ಪಡೆಯುತ್ತೇವೆಯೇ ಹೊರತು ಭಿಕ್ಷಾರೂಪದಲ್ಲಿ ಅಲ್ಲ "ಎಂದು ಹೇಳಿದವರು**

- **ಲಾಲಾ ಲಜಪತ್ ರಾಯ್**



Scanned with OKEN Scanner

Navachethana education YouTube & telegram channel Copy Rights Reserved

7. ಬಂಗಾಳದಲ್ಲಿ 'ಸಾಮೂಹಿಕ ಪ್ರತಿಭಟನೆ'ಯನ್ನು ಸಂಘಟಿಸಿದರು.

- ಬಿಪಿನ್ ಚಂದ್ರ ಪಾಲ್

8. ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ವಸ್ತುಗಳನ್ನು ಮಾತ್ರವೇ ಬಳಸುವುದು ಮತ್ತು ರಾಷ್ಟ್ರೀಯ ಶಾಲೆಗಳನ್ನು ತೆರೆಯುವುದು

ಇವರ ಕಾರ್ಯವಿಧಾನವಾಗಿತ್ತು - ಅರವಿಂದ ಘೋಷ್

9. ತೀವ್ರವಾದಿಗಳ ರಾಷ್ಟ್ರೀಯ ಹೋರಾಟವನ್ನು ಪ್ರೇರೇಪಿಸಿದ ಪ್ರಮುಖ ಘಟನೆಯೆಂದರೆ - 1905ರ ಬಂಗಾಳದ ವಿಭಜನೆ

10. ಬಂಗಾಳದ ವಿಭಜನೆ ಮಾಡಿದ ಗವರ್ನರ್ ಜನರಲ್

- ಲಾರ್ಡ್ ಕರ್ಜನ್

11. 1905ರ ಬಂಗಾಳದ ವಿಭಜನೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿರಿ

A. 1905 ಅಕ್ಟೋಬರ್ 16ರಂದು ಬಂಗಾಳದಾದ್ಯಂತ 'ರಾಷ್ಟ್ರೀಯ ಶೋಕದಿನ'ವನ್ನಾಗಿ ಆಚರಿಸಿದರು, ☑

B. ರವೀಂದ್ರನಾಥ ಟಾಗೋರ್, 'ಅಮರ್ ಸೋನಾರ್ ಬಾಂಗ್ಲ' ಗೀತೆಯನ್ನು ರಾಷ್ಟ್ರೀಯ ಗೀತೆಯಾಗಿ ಹಾಡಿದರು. 'ವಂದೇ ಮಾತರಂ' ಎಲ್ಲರ ಘೋಷಣೆಯಾಗಿತ್ತು. ☑

C. ಬಂಗಾಳದ ಏಕತೆಯನ್ನು ಪ್ರತಿನಿಧಿಸಲು ಹಿಂದೂಮುಸಲ್ಮಾನರು ಪರಸ್ಪರ 'ರಕ್ಷಾ ಬಂಧನ' ಕಟ್ಟಿಕೊಂಡರು. ☑



Scanned with OKEN Scanner

Navachethana education YouTube & telegram channel Copy Rights Reserved

D. ಜನತೆಯ ತೀವ್ರ ಪ್ರತಿಭಟನೆಗಳಿಗೆ ಮಣಿದು 1911ರಲ್ಲಿ ವಿಭಜನೆಯನ್ನು ಬ್ರಿಟಿಷರು ರದ್ದು ಮಾಡಬೇಕಾಯಿತು.☑

ಮೇಲಿನ ಎಲ್ಲವೂ ಸರಿಯಾಗಿದೆ

12.ಮುಸ್ಲಿಮ್ ಲೀಗ್ ಸ್ಥಾಪನೆಯಾದ ವರ್ಷ - 1906

13. ಮುಸ್ಲಿಮ್ ಲೀಗ್ ಸ್ಥಾಪಿಸಿದ ಪ್ರಮುಖ ನಾಯಕರು

- ಸರ್ ಆಗಾಖಾನ್, ಢಾಕಾದ ನವಾಬ ಸಲಿಮುಲ್ಲ ಮತ್ತು ಇನ್ನಿತರರು ಸೇರಿ 1906ರಲ್ಲಿ ಭಾರತ ಮುಸ್ಲಿಮ್ ಲೀಗ್ ನ್ನು ಢಾಕಾದಲ್ಲಿ (ಈಗಿನ ಬಾಂಗ್ಲಾದೇಶ) ಸ್ಥಾಪಿಸಿದರು.

14.1907ರ ಸೂರತ್‌ನಲ್ಲಿ ಉಂಟಾದ ಒಡಕಿನಿಂದ ಯಾವ ಘಟನೆ ಜರುಗಿತು - ಮಂದಗಾಮಿಗಳು ಮತ್ತು ತೀವ್ರಗಾಮಿಗಳ ನಡುವೆ ಕಾಂಗ್ರೆಸ್ ಇಬ್ಭಾಗವಾಯಿತು

15. ಸೂರತ್ ಒಡಕು (1907) ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿರಿ

A.1907ರಲ್ಲಿ ಕಾಂಗ್ರೆಸಿನಲ್ಲಾದ ಒಡಕಿನ ನಂತರ ಸರ್ಕಾರವು ತೀವ್ರಗಾಮಿಗಳ ವಿರುದ್ಧ ದಮನಕಾರಿ ಕ್ರಮಗಳನ್ನು ಕೈಗೊಂಡಿತು. ಅವರಲ್ಲಿ ಅನೇಕರನ್ನು ಸೆರೆಮನೆಗೆ ಕಳುಹಿಸಲಾಯಿತು, ಕೆಲವರನ್ನು ಗಡಿಪಾರು ಮಾಡಲಾಯಿತು.☑

B.ತಿಲಕರಿಗೆ ಕರಿನೀರು ಶಿಕ್ಷೆಯನ್ನು ವಿಧಿಸಿ, ಮಾಂಡಲೆ (ಬರ್ಮಾ) ಸೆರೆಮನೆಗೆ ಗಡಿಪಾರು ಮಾಡಲಾಯಿತು.☑



Scanned with OKEN Scanner

Navachethana education YouTube & telegram channel Copy Rights Reserved

C.ಇದರಿಂದಾಗಿ ರಾಜಕೀಯ ಚಟುವಟಿಕೆಗಳು ತಾತ್ಕಾಲಿಕವಾಗಿ ನಿಧಾನಗೊಂಡವು. ಸೆರೆಮನೆಯ ವಾಸದಲ್ಲೇ ತಿಲಕರು ಗೀತಾ ರಹಸ್ಯ'ವನ್ನು ಬರೆದರು. ☑

ಮೇಲಿನ ಎಲ್ಲವೂ ಸರಿಯಾಗಿದೆ

**16. ರೌಲಟ್ ಕಾಯಿದೆ ಜಾರಿಗೆ ಬಂದ ವರ್ಷ - 1919 ಫೆಬ್ರವರಿ**

**17. ಜಲಿಯನ್ ವಾಲಾಬಾಗ್ ಹತ್ಯಾಕಾಂಡಕ್ಕೆ ಸಂಬಂಧಿಸಿದಂತೆ ಈ ಕೆಳಕಂಡವುಗಳಲ್ಲಿ ಯಾವುದು ಸರಿಯಾಗಿದೆ ?**

A.ರೌಲಟ್ ಕಾಯಿದೆಯ ವಿರುದ್ಧ ಗಾಂಧೀಜಿ ಹಮ್ಮಿಕೊಂಡಿದ್ದ ಸತ್ಯಾಗ್ರಹದಿಂದಾಗಿ ಪಂಜಾಬಿನ ಬಹುತೇಕ ಭಾಗಗಳಲ್ಲಿ ಪ್ರತಿಭಟನೆಗಳು ಆರಂಭವಾದವು.

B.1919 ಏಪ್ರಿಲ್ 13ರಂದು ಅಮೃತಸರದ ಸುವರ್ಣ ಮಂದಿರದಿಂದ ಸ್ವಲ್ಪ ದೂರದಲ್ಲಿರುವ ಜಲಿಯನ್ ವಾಲಾ ಬಾಗ್ ಎಂಬಲ್ಲಿಂದು ಉದ್ಯಾನದಲ್ಲಿ ಸಭೆಯೊಂದನ್ನು ಆಯೋಜಿಸಲಾಗಿತ್ತು.

C.ಸಭೆಯಲ್ಲಿ ತಮ್ಮ ನಾಯಕರಾಗಿದ್ದ ಡಾ. ಕಿಚ್‌ಲೂ ಮತ್ತು ಡಾ. ಸತ್ಯಪಾಲರ ಬಂಧನದ ವಿರುದ್ಧ ಪ್ರತಿಭಟನೆ ಮಾಡುವುದಾಗಿತ್ತು.

D.ಅಮೃತಸರದ ರಕ್ಷಣಾ ಪಾಲಕನಾಗಿದ್ದ ಜನರಲ್ ಡೈಯರನು ಪ್ರತಿಭಟನೆ ಮಾಡುತ್ತಿದ್ದ ಜನರಿಗೆ ಬುದ್ಧಿ ಕಲಿಸಬೇಕೆಂದು ಉದ್ಯಾನದ ಏಕೈಕ ನಿರ್ಗಮನ ದ್ವಾರವನ್ನು ಮುಚ್ಚಿಸಿ ನಿರಾಯುಧರಾಗಿದ್ದ ಜನತೆಯ ಮೇಲೆ ಗುಂಡು ಹಾರಿಸಲು ಆಜ್ಞಾಪಿಸಿದನು. ☑

ಮೇಲಿನ ಎಲ್ಲವೂ ಸರಿಯಾಗಿದೆ



Scanned with OKEN Scanner

Navachethana education YouTube & telegram channel Copy Rights Reserved

## ಕ್ರಾಂತಿಕಾರಿ ರಾಷ್ಟ್ರೀಯತೆ

ತೀವ್ರವಾದಿಗಳಲ್ಲಿ ಕೆಲವು ಮಂದಿ ಸಶಸ್ತ್ರ ಕಾಂತಿಗೆ ಮುಂದಾದರು. ಇವರನ್ನು ಕ್ರಾಂತಿಕಾರಿ ರಾಷ್ಟ್ರೀಯವಾದಿಗಳು ಎನ್ನುವರು,

◆ ರಹಸ್ಯ ಸಂಘಟನೆಯನ್ನು ರೂಪಿಸಿಕೊಂಡ ಕ್ರಾಂತಿಕಾರಿಗಳಲ್ಲಿ ವಾಸುದೇವ ಬಲವಂತ ಫಡ್ಕೆ ಮೊದಲಿನವರು

◆ ರಹಸ್ಯ ಸಂಘಟನೆಯ ಜೀವನಾಡಿಗಳಾಗಿದ್ದವರು -

ದಾಮೋದರ ಮತ್ತು ಬಾಲಕೃಷ್ಣ ಚಾಪೇಕರ್ ಸಹೋದರರು

18. ಕ್ರಾಂತಿಕಾರಿಗಳ ಸರಿಯಾದ ಗುಂಪನ್ನು ಗುರುತಿಸಿ.

- ವಿನಾಯಕ ದಾಮೋದರ ಸಾವರ್ಕರ್
- ಖುದಿರಾಮ್ ಬೋಸ್
- ಚಂದ್ರಶೇಖರ ಆಜಾದ್
- ಭಗತ್ ಸಿಂಗ್
- ಖುದಿರಾಮ್ ಬೋಸ್

19. ಸ್ವಾತಂತ, ಹೋರಾಟದಲ್ಲಿ ನೇಣುಗಂಬ ಏರಿದ ಭಾರತದ ಮೊದಲ ಹುತಾತ್ಮ

- ಖುದಿರಾಮ್ ಬೋಸ್ (1908)

- ಆಗ ಅವನ ವಯಸ್ಸು 19 ವರ್ಷ

20. 1899ರಲ್ಲಿ 'ಮಿತ್ರಮೇಳ' ಎನ್ನುವ ಗುಪ್ತ ಸಂಘಟನೆಯನ್ನು ಕಟ್ಟಿದವರು

- ವಿನಾಯಕ ದಾಮೋದರ ಸಾವರ್ಕರ್



Scanned with OKEN Scanner

Navachethana education YouTube & telegram channel Copy Rights Reserved

- ನಂತರ ಇದನ್ನೇ ಅಭಿನವ ಭಾರತ ಎಂದು ಕರೆಯಲಾಗಿತು

**21. ಹಿಂದುಸ್ಥಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್ ಸ್ಥಾಪಕ (HSRA) -**

**ಚಂದ್ರಶೇಖರ ಆಜಾದ್**

**22. ಭಗತ್ ಸಿಂಗ್ ಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ**

A.ಭಗತ್ ಸಿಂಗ್ ಹಿಂದೂಸ್ಥಾನ್ ಸಮಾಜವಾದಿ ರಿಪಬ್ಲಿಕನ್ ಸಂಘಟನೆಯನ್ನು ಸೇರಿ ಅದರ ಪ್ರಧಾನ ಕಾರ್ಯದರ್ಶಿಯಾದನು. ☑

B.1929ರಲ್ಲಿ ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ್ ದಿಲ್ಲಿಯಲ್ಲಿ ಕೇಂದ್ರೀಯ ಶಾಸನಸಭೆಯ ಮೇಲೆ ಬಾಂಬೆಸೆದರು. ಲಾಹೋರ್ ಸೆಂಟ್ರಲ್ ಜೈಲಿನಲ್ಲಿ ಈ ಮೂವರನ್ನು ಗಲ್ಲಿಗೇರಿಸಲಾಯಿತು. ☑

C. ಭಗತ್‌ಸಿಂಗ್ "ಇಂಕ್ವಿಲಾಬ್ ಜಿಂದಾಬಾದ್" (ಕ್ರಾಂತಿ ಚಿರಾಯುವಾಗಲಿ) ಎಂಬ ಘೋಷಣೆಯನ್ನು ಮೊದಲ ಬಾರಿಗೆ ಹಾಕಿದ ಭಾರತೀಯನಾಗಿದ್ದಾನೆ. ☑

ಮೇಲಿನ ಎಲ್ಲವೂ ಸರಿಯಾಗಿದೆ

**23. 1913ರಲ್ಲಿ ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಘದರ್ ಚಳವಳಿಯನ್ನು ಪಾರಂಭಿಸಿದವನು -** ಸೋಹನ್ ಸಿಂಗ್ ಭಾಕ್ನಾ



Scanned with OKEN Scanner

Navachethana education YouTube & telegram channel Copy Rights Reserved

## ಗಾಂಧಿ ಯುಗ (1919-1947)

❖ ಗಾಂಧೀಜಿಯವರು 1869ರ ಅಕ್ಟೋಬರ್ 2ರಂದು ಪೋರಬಂದರ್ ಎಂಬಲ್ಲಿ ಕರಮಚಂದ ಗಾಂಧಿ ಮತ್ತು ಪುತಲೀಬಾಯಿಯವರ ಮಗನಾಗಿ ಜನಿಸಿದರು. ಅವರ ತಂದೆ ಪೋರಬಂದರ್ ಮತ್ತು ರಾಜಕೋಟ್ ಸಂಸ್ಥಾನಗಳಲ್ಲಿ ದಿವಾನ್ (ಮುಖ್ಯಮಂತ್ರಿ) ಆಗಿದ್ದರು.

**1.ಈ ಕೃತಿಗಳಲ್ಲಿ ಗಾಂಧೀಜಿಯವರ ಜೀವನದ ಮೇಲೆ ಪ್ರಭಾವ ಬೀರಿದ ಪ್ರಮುಖ ಕೃತಿ ಯಾವುದು ?**

A.ಜಾನ್ ರಸ್ಕಿನ್‌ನ ರಚಿಸಿದ 'ಕೊನೆಯ ತನಕ '

B.ಟಾಲ್ ಸ್ಟಾಯ್ ಅವರ 'ನಿನ್ನಂತರಂಗವೇ ದೇವರ ರಾಜ್ಯ'

C.ಭಗವದ್ಗೀತೆ & ಸತ್ಯಹರಿಶ್ಚಂದ್ರ ನಾಟಕ

ಮೇಲಿನ ಎಲ್ಲವೂ

**2. 1893 ರಲ್ಲಿ ಮಹಾತ್ಮ ಗಾಂಧೀಜಿಯವರು ದಕ್ಷಿಣ ಆಫ್ರಿಕಾದ ನಾಟಲ್ ಹೋಗಲು ಕಾರಣವೆಂದರೆ** - ದಾದಾ ಅಬ್ದುಲ್ಲಾ ಕಂಪನಿಯ ಆಹ್ವಾನದ ಮೇರೆಗೆ ಕಾನೂನು ಸಲಹೆಗಾರರಾಗಿ ದಕ್ಷಿಣ ಆಫ್ರಿಕಕ್ಕೆ ತೆರಳಿದರು.

**TET 2020**



Scanned with OKEN Scanner

Navachethana education YouTube & telegram channel Copy Rights Reserved

ಸತ್ಯಾಗ್ರಹ ಸಿದ್ಧಾಂತವು ಸಂಸ್ಕೃತದ ಎರಡು ಪದಗಳಿಂದ ಕೂಡಿದೆ: 'ಸತ್ಯ' ಎಂದರೆ ವಾಸ್ತವಿಕ ಸಂಗತಿ, 'ಆಗ್ರಹ' ಎಂದರೆ ಒತ್ತಾಯ. ಇದರರ್ಥ "ಸತ್ಯದಪರ ದೃಢವಾಗಿ ನಿಲ್ಲು",

3. ಭಾರತಕ್ಕೆ ಹಿಂತಿರುಗಿದ ನಂತರ ಗಾಂಧೀಜಿಯವರು ಅಹಮದಾಬಾದಿನಲ್ಲಿ ಸಾಬರಮತಿ ಆಶ್ರಮವನ್ನು (1916) ಸ್ಥಾಪಿಸಿದರು.

4. ಗಾಂಧೀಜಿಯವರ ರಾಜಕೀಯ ಗುರು - ಗೋಪಾಲಕೃಷ್ಣ ಗೋಕುಲೆ

5.1919ರಲ್ಲಿ ಕಮಾಲ್ ಪಾಷಾ ಎಂಬ ನಾಯಕನು ಟರ್ಕಿಯ ಖಲೀಫನ ಅರಸೊತ್ತಿಗೆಯನ್ನು ಮೂಲೆಗೊತ್ತಿ ಅಧಿಕಾರಕ್ಕೇರಿದನು.

6. ಖಿಲಾಫತ್ ಚಳುವಳಿಯ ಪ್ರಮುಖ ನಾಯಕರು

- ಮೊಹಮ್ಮದ್ ಅಲಿ & ಶೌಕತ್ ಅಲಿ

7. ಖಿಲಾಫತ್ ಚಳುವಳಿಗೆ ಸಂಬಂಧಿಸಿದಂತೆ ಯಾವುದು ಸರಿಯಾಗಿದೆ ?

A.1919ರಲ್ಲಿ ಕಮಾಲ್ ಪಾಷಾ ಎಂಬ ನಾಯಕನು ಟರ್ಕಿಯ ಖಲೀಫರ ಅರಸೊತ್ತಿಗೆಯನ್ನು ಮೂಲೆಗೊತ್ತಿ ಅಧಿಕಾರಕ್ಕೆ ಬಂದನು ☑

B. ಇದಕ್ಕೆ ಪ್ರತಿಕ್ರಿಯಿಸಿದ ಭಾರತೀಯ ಮುಸ್ಲಿಮರ ಖಲೀಫರ ಪರವಾಗಿಯೂ ಬ್ರಿಟನಿನ ವಿರುದ್ಧವಾಗಿಯೂ ಆಂದೋಲನ ನಡೆಸಿದರು. ☑

C.ಗಾಂಧೀಜಿಯವರು ಈ ಚಳುವಳಿಯ ಮುಂದಾಳುತನವನ್ನು ವಹಿಸಿದರು ☑

D.ಮೊಹಮ್ಮದ್ ಅಲಿ ಮತ್ತು ಶೌಕತ್ ಅಲಿ ಈ ಚಳುವಳಿಯ ಪ್ರಮುಖ ನಾಯಕರಾಗಿದ್ದರು. ☑



Scanned with OKEN Scanner

Navachethana education YouTube & telegram channel Copy Rights Reserved

ಮೇಲಿನ ಎಲ್ಲವೂ ಸರಿಯಾಗಿದೆ

8.ಗಾಂಧೀಜಿಯವರ ನಾಯಕತ್ವದಲ್ಲಿ ಅಸಹಕಾರ ಚಳವಳಿಯು 1920 ಆರಂಭವಾಯಿತು.

9. ಅಸಹಕಾರ ಚಳವಳಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ

A.ಈ ಚಳವಳಿಯಲ್ಲಿ ವಿದ್ಯಾರ್ಥಿಗಳು, ರೈತರು ಮತ್ತು ಮಹಿಳೆಯರಿದ್ದರು. ಇದು ಭಾರತೀಯರಿಗೆ ಹೊಸ ಅನುಭವವಾಗಿತ್ತು.☑

B.ರವೀಂದ್ರನಾಥ್ ಟಾಗೋರ್ ತಮ್ಮ 'ನೈಟ್‌ಹುಡ್' ಹಾಗೂ ಗಾಂಧೀಯವರು ತಮ್ಮ 'ಕೈಸರ್-ಎ-ಹಿಂದ್' ಪದವಿಗಳನ್ನು ಬ್ರಿಟಿಷ್ ಸರ್ಕಾರಕ್ಕೆ ಹಿಂತಿರುಗಿಸಿದರು.☑

C. ಉತ್ತರ ಪ್ರದೇಶದ ಚೌರಿಚೌರಾದಲ್ಲಿ ಉದ್ರಿಕ್ತ ಜನಸ್ತೋಮ ಹಿಂಸಾಕೃತ್ಯದಲ್ಲಿ ತೊಡಗಿ ಅಲ್ಲಿನ ಠಾಣೆಯ 22 ಮಂದಿ ಪೊಲೀಸರನ್ನು ಜೀವಂತ ದಹಿಸಿತು (1922)☑

D. ಗಾಂಧೀಜಿಯವರು ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದರು. ತಮ್ಮ ಅಹಿಂಸಾ ಸಿದ್ಧಾಂತಕ್ಕೆ ವಿರುದ್ಧವಾಗಿ ಜನತೆ ವರ್ತಿಸುತ್ತಿರುವುದನ್ನು ಕಂಡು ವಿಷಾದಿಸುತ್ತಾ ಅಸಹಕಾರ ಚಳವಳಿಯನ್ನು ನಿಲ್ಲಿಸಿದರು.☑

ಮೇಲಿನ ಎಲ್ಲವೂ ಸರಿಯಾಗಿದೆ

### ನೆಹರು ವರದಿ (1927)

ಬ್ರಿಟಿಷರು ಭಾರತೀಯ ರಾಜಕೀಯ ನಾಯಕರಿಗೆ ಎಲ್ಲಾ ಸಮುದಾಯದವರು ಒಪ್ಪುವಂತಹ ಸಂವಿಧಾನವನ್ನು ರಚಿಸಿಕೊಳ್ಳುವಂತೆ ಸವಾಲೆಸೆದರು. ಭಾರತೀಯ



Scanned with OKEN Scanner

Navachethana education YouTube & telegram channel Copy Rights Reserved

ಸರ್ವಪಕ್ಷಗಳ ಸಮ್ಮೇಳನದಲ್ಲಿ ಮೋತಿಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು.

**10.ಸೈಮನ್ ನಿಯೋಗಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ**

A.1928 ರಲ್ಲಿ ಸೈಮನ್ ನಿಯೋಗವನ್ನು ಭಾರತಕ್ಕೆ ಕಳುಹಿಸಿತು ನಿಯೋಗವು ಇಂಗ್ಲಿಷ್ ಸದಸ್ಯರನ್ನು ಮಾತ್ರವೇ ಒಳಗೊಂಡಿದ್ದು ಭಾರತೀಯರಿಗೆ ಅದರಲ್ಲಿ ಪ್ರಾತಿನಿಧ್ಯವಿರಲಿಲ್ಲ.☑

B.ಭಾರತೀಯರು "ಸೈಮನ್ನರೆ ಹಿಂತಿರುಗಿ" ಎಂಬ ಘೋಷಣೆಯನ್ನು ಮೊಳಗಿಸುವುದರೊಂದಿಗೆ ನಿಯೋಗವನ್ನು ಬಹಿಷ್ಕರಿಸಿದರು. ☑

C.ಲಾಹೋರಿನಲ್ಲಿ ನಡೆದ ಬಹಿರಂಗ ಪ್ರತಿಭಟನೆಯು ತೀವ್ರ ಸ್ವರೂಪವನ್ನು ತಾಳಿತು. ಈ ಸಂದರ್ಭದಲ್ಲಿ ನಡೆದ ಲಾರಿ ಪ್ರಯೋಗದಲ್ಲಿ ಲಾಲಾ ಲಜಪತ್ ರಾಯ್ ಅವರು ಚೇತರಿಸಿಕೊಳ್ಳಲಾಗದೆ ಮರಣ ಹೊಂದಿದರು ☑

ಮೇಲಿನ ಎಲ್ಲವೂ ಸರಿಯಾಗಿದೆ

**11. ಬ್ರಿಟಿಷರನ್ನು ಭಾರತದಿಂದ ಹೊರದೂಡುವ ಬಗ್ಗೆ ಲಾಲಾ ಲಜಪತ್ ರಾಯ್ ನುಡಿದಿದ್ದ ಭವಿಷ್ಯವಾಣಿ ಇದಾಗಿದೆ:** "ನನ್ನ ಮೈಮೇಲಿನ ಲಾಠಿ ಹೊಡೆತಗಳು ಮುಂದೊಂದು ದಿನ ಬ್ರಿಟಿಷ್ ಶವಪೆಟ್ಟಿಗೆ ಮೇಲಿನ ಮೊಳಗಳಾಗಳಿವೆ "

**2019TET**

**12. ಪೂರ್ಣ ಸ್ವರಾಜ್ಯಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ**



Scanned with OKEN Scanner

Navachethana education YouTube & telegram channel Copy Rights Reserved

A.1929ರಲ್ಲಿ ಲಾಹೋರಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ 'ಸಂಪೂರ್ಣ ಸ್ವಾತಂತ್ರ'ದ ನಿರ್ಣಯವನ್ನು ಮಂಡಿಸಲಾಯಿತು. ☑

B.1930ರ ಜನವರಿ 26ರಂದು 'ಪೂರ್ಣ ಸ್ವರಾಜ್ಯದಿನ" ಎಂದು ಆಚರಿಸಲು ಅಧಿವೇಶನದಲ್ಲಿ ನಿರ್ಧರಿಸಲಾಯಿತು.☑

C.ಈ ಐತಿಹಾಸಿಕ ಸಂಭ್ರಮಾಚರಣೆಯ ದಿನದ ನೆನಪನ್ನು ಹಸಿರಾಗಿಸಲು, ಸ್ವತಂತ್ರ ಭಾರತದ ಸಂವಿಧಾನವನ್ನು ಜನವರಿ 26, 1950ರಂದು ಅಂಗೀಕರಿಸಲಾಯಿತು.☑

D.ಅಂದಿನಿಂದ ಪ್ರತಿವರ್ಷ ಆ ದಿನವನ್ನು ಗಣರಾಜ್ಯೋತ್ಸವ ದಿನವಾಗಿ ಆಚರಿಸಲಾಗುತ್ತಿದೆ.☑

ಮೇಲಿನ ಎಲ್ಲವೂ ಸರಿಯಾಗಿದೆ

**13. ನಾಗರಿಕ ಕಾನೂನುಭಂಗ ಚಳವಳಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ**

A.ನಾಗರಿಕ ಕಾನೂನುಭಂಗ ಚಳವಳಿಯನ್ನು 1930ರ ಮಾರ್ಚ್ 12ರಂದು ಗಾಂಧೀಜಿ ಅವರು ಪ್ರಸಿದ್ಧ ದಂಡಿಯಾತ್ರೆಯೊಂದಿಗೆ ಆರಂಭಿಸಿದರು ಆಯ್ದ 78 ಮಂದಿ ಅನುಯಾಯಿಗಳೊಡನೆ ಗಾಂಧೀಜಿ ಸಾಬರಮತಿ ಆಶ್ರಮದಿಂದ ಗುಜರಾತಿನ ಕಡಲತೀರದ ದಂಡಿಯವರೆಗೂ ಸುಮಾರು 375 ಕಿ.ಮೀ. ದೂರವನ್ನು ಕ್ರಮಿಸಿದರು.☑

B.ಜನರಿಂದ ಉಪ್ಪನ್ನು ಉತ್ಪಾದಿಸುವುದರ ಮೂಲಕ ಉಪ್ಪಿನ ಕಾನೂನನ್ನು ಮುರಿಯುವುದು ಈ ಯಾತ್ರೆಯ ಮುಖ್ಯ ಉದ್ದೇಶವಾಗಿತ್ತು.☑

C. ಕಾನೂನುಭಂಗ ಚಳವಳಿಯು ಬಹುಬೇಗ ದೇಶದಾದ್ಯಂತ ಹರಡಿತು. ಎಲ್ಲೆಡೆ ಜನರು ಹರತಾಳ, ವಿದೇಶಿ ವಸ್ತುಗಳ ಬಹಿಷ್ಕಾರ, ಖಾದಿಪ್ರಚಾರ, ಮದ್ಯದ ಅಂಗಡಿಗಳ ಮುಂದೆ



Scanned with OKEN Scanner

Navachethana education YouTube & telegram channel Copy Rights Reserved

ಪ್ರತಿಭಟನೆ, ಅರಣ್ಯ ಸತ್ಯಾಗ್ರಹ, ಕರನಿರಾಕರಣೆ ಮೊದಲಾದವುಗಳಲ್ಲಿ ಭಾಗವಹಿಸಿದರು.☑

D.ಅಂಕೋಲೆಯ ಉಪ್ಪಿನ ಸತ್ಯಾಗ್ರಹವು ದಾಖಲೆಯನ್ನು ನಿರ್ಮಿಸಿ ಭಾರತಾದ್ಯಂತ ಖ್ಯಾತಿ ಗಳಿಸಿತು.☑

ಮೇಲಿನ ಎಲ್ಲವೂ ಸರಿಯಾಗಿದೆ

**14. 'ಖುದಾಯಿ ಖಿದ್ಮತ್‌ಗಾರ' (ದೇವರ ಸೇವಕರು) ಎಂಬ ಸಂಘವನ್ನು ಸ್ಥಾಪಿಸಿದವರು -**

ಖಾನ್ ಅಬ್ದುಲ್ ಗಫಾರ್ ಖಾನ್

- ಗಡಿನಾಡ ಗಾಂಧಿ - ಖಾನ್ ಅಬ್ದುಲ್ ಗಫಾರ್ ಖಾನ್

**15. ಬ್ರಿಟಿಷರ ವಿರುದ್ಧ ನಾಗಾಲ್ಯಾಂಡಿನಲ್ಲಿ ಬಂಡಾಯ ನಡೆಸಿದ 13 ವರ್ಷದ ಬಾಲೆ -**

ರಾಣಿ ಗಾಯ್ದಿಲ್ಯೂ

**16. 2ನೇ ದುಂಡು ಮೇಜಿನ ಸಭೆಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಪ್ರತಿನಿಧಿ**

- ಗಾಂಧಿಜಿಯವರು

**17. ಭಾರತ ಬಿಟ್ಟು ತೊಲಗಿ ಚಳವಳಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿರಿ**

A.ಕ್ರಿಪ್ಸ್ ಆಯೋಗದ ವೈಫಲ್ಯವು ಭಾರತೀಯರನ್ನು ಕೆರಳಿಸಿತು. ಗಾಂಧೀಜಿ ಅವರು 1942ರ ಆಗಸ್ಟ್ 8ರಂದು ಮುಂಬೈನಲ್ಲಿ ಕಾಂಗ್ರೆಸಿನ ಸಭೆ ಕರೆದರು. ಅಲ್ಲಿ ಪ್ರಸಿದ್ಧ 'ಭಾರತ ಬಿಟ್ಟು ತೊಲಗಿ' ಎಂಬ ನಿರ್ಣಯವನ್ನು ಅಂಗೀಕರಿಸಿದರು.☑





Scanned with OKEN Scanner

Navachethana education YouTube & telegram channel Copy Rights Reserved

B. ಭಾರತೀಯರಿಗೆ 'ಮಾಡು ಇಲ್ಲವೆ ಮಡಿ' ಎಂಬ ಘೋಷಣೆ ನೀಡಿದರು. ಸರ್ಕಾರವು ಮರುದಿನವೆ ಗಾಂಧೀಜಿ ಮತ್ತು ಇತರ ನಾಯಕರನ್ನು ಬಂಧಿಸಿತು.☑

C.ಬಂಧನದ ಸುದ್ದಿ ಹರಡುತ್ತಿದ್ದಂತೆಯೆ ದೇಶದಾದ್ಯಂತ ಹರತಾಳಗಳು, ಶಾಲಾಕಾಲೇಜು ಮತ್ತು ಕಾರ್ಖಾನೆಗಳಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಪ್ರತಿಭಟನೆಗಳು ನಡೆದವು. ಪೊಲೀಸ್ ಠಾಣೆಗಳು, ಅಂಚೆ ಕಚೇರಿಗಳು, ರೈಲ್ವೆ ನಿಲ್ದಾಣಗಳ ಮೇಲೆ ವಿವಿಧೆಡೆ ಆಕ್ರಮಣಗಳು ಜರುಗಿದವು. ವಿದ್ಯಾರ್ಥಿಗಳು, ಕಾರ್ಮಿಕರು ಮತ್ತು ರೈತರು 'ಬಂಡಾಯ'ವನ್ನು ಬೆಂಬಲಿಸಿದರು.☑

D. 'ಭಾರತ ಬಿಟ್ಟು ತೊಲಗಿ' ಚಳವಳಿಯು ಕೂಡ ತತ್‌ಕ್ಷಣದ ರಾಜಕೀಯ ಉದ್ದೇಶವನ್ನು ಸಾಧಿಸುವಲ್ಲಿ ವಿಫಲವಾಯಿತು.☑

ಮೇಲಿನ ಎಲ್ಲವೂ ಸರಿಯಾಗಿದೆ

**18.** ಗಾಂಧೀಜಿ ಬಗ್ಗೆ ಕುರಿತು "ಮುಂದಿನ ಪೀಳಗೆಗಳು ರಕ್ತಮಾಂಸಗಳಿಂದ ಕೂಡಿದ ಇಂತಹ ಒಬ್ಬ ವ್ಯಕ್ತಿ ಈ ಭೂಮಿಯ ಮೇಲೆ ನಡೆದಾಡಿದ್ದರು ಎಂಬುದನ್ನು ನಂಬಲು ಕಷ್ಟಪಡುತ್ತಾರೆ". ಎಂಬ ಹೇಳಿಕೆ ನೀಡಿದವರು

- ಐನ್ ಸ್ಟೈನ್

**19.** 'ಕಾಂಗ್ರೆಸ್ ಸೋಷಲಿಷ್ ಪಕ್ಷ'ದ ಮಹಾಕಾರ್ಯದರ್ಶಿ

- ಜಯಪ್ರಕಾಶ್ ನಾರಾಯಣ್,

- ಆಚಾರ್ಯ ನರೇಂದ್ರ ದೇವ್ ಪಕ್ಷದ ಇನ್ನೊಬ್ಬ ಪ್ರಮುಖ ನಾಯಕರು



Scanned with OKEN Scanner

Navachethana education YouTube & telegram channel Copy Rights Reserved

20.ಸ್ವಾತಂತ್ರ್ಯನಂತರದಲ್ಲಿ ಅವರು ವಿನೋಬಾ ಭಾವೆಯವರ ಭೂದಾನ ಚಳವಳಿಯಲ್ಲಿ ಗುರುತಿಸಿಕೊಂಡರು..

21. ಜಯಪ್ರಕಾಶ್ ನಾರಾಯಣರು 'ಸಂಪೂರ್ಣ ಕ್ರಾಂತಿ' ಎಂಬ ಆಂದೋಳನವನ್ನು ಹುಟ್ಟಿಹಾಕಿದರು.

- ಜಯಪ್ರಕಾಶ್ ನಾರಾಯಣ್ ನ್ನು ಜನರು ಪ್ರೀತಿಯಿಂದ 'ಲೋಕನಾಯಕ' ಎಂದೇ ಕರೆದರು.

22. ಚಂಪಾರಣ್ಯ ಸತ್ಯಾಗ್ರಹಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿರಿ

A.ಚಂಪಾರಣ್ಯ(ಬಿಹಾರ) ರೈತರು ಪ್ಲಾಂಟರುಗಳ ವಿರುದ್ಧ ಹೊಂದಿರುವ ಅಸಮಾಧಾನ ಮತ್ತು ಪ್ರತಿಭಟನೆಗೆ ಸುದೀರ್ಘ ಇತಿಹಾಸವಿದೆ.☑

B. ಪ್ಲಾಂಟರ್‌ಗಳು ಬಲವಂತವಾಗಿ ನೀಲಿ ಬೆಳೆಯುವಂತೆ ರೈತರನ್ನು ಒತ್ತಾಯಿಸುತ್ತಿದ್ದರು.
ಗಾಂಧೀಜಿ ಅವರ ವಿರುದ್ಧ 1917ರಲ್ಲಿ ಚಂಪಾರಣ್ಯ ಸತ್ಯಾಗ್ರಹವನ್ನು ಆರಂಭಿಸಿದರು.☑

C. ಕೊನೆಯಲ್ಲಿ ರೈತರ ಸಮಸ್ಯೆ ಪರಿಹಾರ ಕಂಡಿತು☑

D. ಈ ಚಳವಳಿಯ ಮೂಲಕ ಬಾಬು ರಾಜೇಂದ್ರ ಪ್ರಸಾದ್ ಪ್ರಮುಖ ನಾಯಕರಾಗಿ ರೂಪುಗೊಂಡರು.☑

ಮೇಲಿನ ಎಲ್ಲವೂ ಸರಿಯಾಗಿದೆ

23. ಖೇಡಾ ರೈತ ಹೋರಾಟಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿರಿ



Scanned with OKEN Scanner

Navachethana education YouTube & telegram channel Copy Rights Reserved

A.ಖೇಡಾ ಗುಜರಾತ್ ರಾಜ್ಯದ ಪ್ರಮುಖ ಜಿಲ್ಲೆ. 1918ರ ಸಂದರ್ಭದಲ್ಲಿ ಬೆಳೆಗಳು ವಿಫಲವಾಗಿ ರೈತರು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದರು.☑

B.ಈ ಹಿನ್ನೆಲೆಯಲ್ಲಿ ಅವರು, ಕಂದಾಯ ಕಟ್ಟುವುದರಿಂದ ವಿನಾಯಿತಿ ನೀಡಬೇಕೆಂದು ಸರಕಾರಕ್ಕೆ ಮನವಿ ಸಲ್ಲಿಸಿದರು. ಸರಕಾರ ಇವರ ಮನವಿಯನ್ನು ತಿರಸ್ಕರಿಸಿದ್ದಲ್ಲದೆ, ಕಂದಾಯ ಸಂಗ್ರಹಣೆಗೆ ಒತ್ತಾಯಿಸಿತು. ಪರಿಣಾಮವಾಗಿ ಖೇಡಾದಲ್ಲಿ ರೈತ ಹೋರಾಟ ಪ್ರಾರಂಭವಾಯಿತು.☑

C.ಗಾಂಧೀಜಿಯವರು ಈ ಹೋರಾಟಕ್ಕೆ ತಮ್ಮ ಪೂರ್ಣ ಬೆಂಬಲವನ್ನು ನೀಡಿದ್ದಲ್ಲದೆ, ರೈತರು ಕಂದಾಯವನ್ನು ಕಟ್ಟಬಾರದೆಂದು ತಿಳಿಸಿದರು.☑

D.ಅಂತಿಮವಾಗಿ ತಮ್ಮ ನಿರ್ಧಾರವನ್ನು ಬದಲಾಯಿಸಿಕೊಂಡ ಸರಕಾರ, ಯಾರಿಗೆ ಸಾಧ್ಯವಾಗುವುದೋ ಅಂತಹ ರೈತರು ಕಂದಾಯವನ್ನು ಕಟ್ಟಬಹುದೆಂದು ತಿಳಿಸಿತು. ಇದನ್ನು ಒಪ್ಪಿದ ಗಾಂಧೀಜಿಯವರು ಚಳವಳಿಯನ್ನು ಕೈಬಿಡಲು ಒಪ್ಪಿದರು. ಈ ಹೋರಾಟದ ಮೂಲಕ ರಾಜಕೀಯವಾಗಿ ಬೆಳೆದ ನಾಯಕರೆಂದರೆ ಸರದಾರ ವಲ್ಲಭಭಾಯಿ ಪಟೇಲರು.☑

ಮೇಲಿನ ಎಲ್ಲವೂ ಸರಿಯಾಗಿದೆ

24. ಮಾಪಿಳ್ಳೆ ದಂಗೆ: ರೈತ ಚಳವಳಿಗಳಲ್ಲಿ ಮಲಬಾರಿನಲ್ಲಿ ನಡೆದ ಮಾಪಿಳ್ಳೆಗಳ ದಂಗೆಯು (1921) ಪ್ರಸಿದ್ಧವಾಗಿದೆ.

25. ಎರಡನೇ ಮಹಾಯುದ್ಧದ ಅಂತ್ಯದಲ್ಲಿ (1945) ಅಧಿಕಾರಕ್ಕೆ ಬಂದ ಲೇಬರ್ ಪಕ್ಷವು ಭಾರತದ ಜತೆ ರಾಜಕೀಯ ಒಪ್ಪಂದವೊಂದನ್ನು ಮಾಡಿಕೊಳ್ಳಬಯಸಿತು. ಈ ಅಂತಿಮ



Scanned with OKEN Scanner

Navachethana education YouTube & telegram channel Copy Rights Reserved

ಹಂತದಲ್ಲಿ ಭಾರತದ ಭವಿಷ್ಯಕ್ಕೆ ಸಂಬಂಧಿಸಿದ ನಿರ್ಣಾಯಕ ನಿರ್ಧಾರಗಳನ್ನು ಮೌಲಾನಾ ಅಬುಲ್ ಕಲಂ ಆಜಾದ್, ಜವಾಹರಲಾಲ್ ನೆಹರು ಮತ್ತು ವಲ್ಲಭಭಾಯ್ ಪಟೇಲ್ ತೆಗೆದುಕೊಂಡರು

26. ಭಾರತಕ್ಕೆ ಅಧಿಕಾರವನ್ನು ಹಸ್ತಾಂತರಿಸಲು ಅನುಸರಿಸಬೇಕಾದ ಮಾರ್ಗಗಳನ್ನು ಕಂಡು ಕೊಳ್ಳಲು ಬ್ರಿಟಿಷ್ ಸರ್ಕಾರ 1946ರಲ್ಲಿ ಕ್ಯಾಬಿನೇಟ್ ಆಯೋಗವನ್ನು ಭಾರತಕ್ಕೆ ಕಳುಹಿಸಿತು.

27. ಜಿನ್ನಾ ನೇತೃತ್ವದ ಮುಸ್ಲಿಂ ಲೀಗ್ ಪಾಕಿಸ್ತಾನವೆಂದು ಕರೆಯಲ್ಪಡುವ ಪ್ರತ್ಯೇಕ ಮುಸ್ಲಿಂ ದೇಶಕ್ಕಾಗಿ ಪಟ್ಟು ಹಿಡಿಯಿತು. ಹೀಗಾಗಿ ಭಾರತವನ್ನು ವಿಭಜಿಸುವುದು ಅನಿವಾರ್ಯವಾಯಿತು.

28.1947ರ ಜೂನ್ 3ರಂದು ಭಾರತದ ಕೊನೆಯ ಮತ್ತು 34ನೇ ವೈಸ್‌ರಾಯ್ ಆದ ಲಾರ್ಡ್ ಮೌಂಟ್ ಬ್ಯಾಟನ್ ಭಾರತವನ್ನು ವಿಭಜಿಸಿ ಅಧಿಕಾರವನ್ನು ಭಾರತೀಯರಿಗೆ ಹಸ್ತಾಂತರಿ ಸಲಾಗುವುದೆಂಬ ಐತಿಹಾಸಿಕ ನಿರ್ಣಯವನ್ನು ಘೋಷಿಸಿದರು.

29. 1947ರ ಆಗಸ್ಟ್ 14ರಂದು ಪಾಕಿಸ್ತಾನ ಭಾರತದಿಂದ ಪ್ರತ್ಯೇಕಗೊಂಡಿತು.

30. ಭಾರತ 1947ರ ಆಗಸ್ಟ್ 15ರಂದು ಸ್ವತಂತ್ರಗೊಂಡಿತು. ಜವಾಹರಲಾಲ್ ನೆಹರು ಸ್ವತಂತ್ರ ಭಾರತದ ಮೊದಲ ಪ್ರಧಾನಮಂತ್ರಿಯಾದರು.



Scanned with OKEN Scanner

Navachethana education YouTube & telegram channel Copy Rights Reserved

31. 1927ರಲ್ಲಿ ಜಿನ್ನಾ ಅವರು 14 ಅಂಶಗಳ ಬೇಡಿಕೆಗಳನ್ನು ಮುಂದಿಟ್ಟರು. ಇವನ್ನು ದಿಲ್ಲಿ ಘೋಷಣೆ ಎನ್ನುವರು.

32. 1936ರ ನಂತರ 'ಎರಡು ರಾಷ್ಟ್ರಗಳ ಸಿದ್ಧಾಂತ'ದ ಪ್ರತಿಪಾದಕದವರು

- ಮಹಮ್ಮದ್ ಆಲಿ ಜಿನ್ನಾ

- 1940ರ ಮುಸ್ಲಿಂ ಲೀಗ್ ಲಾಹೋರ್ ಅಧಿವೇಶನದಲ್ಲಿ ಅಂಗೀಕಾರವಾಯಿತು.

33. ಮುಸ್ಲಿಂ ಲೀಗ್ ಬಯಸುತ್ತಿದ್ದ ಹೊಸ ದೇಶಕ್ಕೆ 'ಪಾಕಿಸ್ತಾನ್' ಎಂಬ ಹೆಸರು ಕೊಟ್ಟವರು

- ಚೌಧರಿ ರಹಮತ್ ಅಲಿ

- ಪಂಜಾಬ್, ಅಫಘನ್ , ಕಾಶ್ಮೀರ, ಸಿಂಧ್ ಮತ್ತು ಬಲೂಚಿಸ್ತಾನ್ ಎಂಬ ಪ್ರಾಂತ್ಯಗಳ ಹೆಸರಿನ ಮೊದಲ ಇಂಗ್ಲಿಷ್ ಅಕ್ಷರಗಳನ್ನು ಬಳಸಿಕೊಂಡು "ಪಾಕಿಸ್ತಾನ" ಎಂದು ಕರೆಯಲಾಗಿದೆ. PAKISTAN ಹೆಸರಿನ ಕೊನೆಯ ಮೂರು ವರ್ಣಗಳು ಬಲೂಚಿಸ್ತಾನ ಪ್ರಾಂತ್ಯವನ್ನು ಸಂಕೇತಿಸುತ್ತದೆ.

34. 1939ರಲ್ಲಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ ಪಕ್ಷದಿಂದ ಹೊರಬಂದರು. ನಂತರ 'ಫಾರ್ವಡ್ ಬ್ಲಾಕ್' ಎಂಬ ಹೊಸ ಪಕ್ಷವನ್ನು ಸಂಘಟಿಸಿದವರು

- ಸುಭಾಷ್‌ಚಂದ್ರ ಬೋಸ್

35. ಮೋಹನ್ ಸಿಂಗ್ ನೇತೃತ್ವದಲ್ಲಿ ಭಾರತೀಯ ರಾಷ್ಟ್ರೀಯ ಸೇನೆ (ಇಂಡಿಯನ್ ನೇಷನಲ್ ಆರ್ಮಿಐ.ಎನ್.ಎ.)INA ಅಥವಾ ಆಜಾದ್ ಹಿಂದ್ ಫೌಜ್' ಎಂಬ ಹೆಸರಿನಿಂದ ಸಂಘಟಿತರಾಗಿದ್ದರು.



Scanned with OKEN Scanner

Navachethana education YouTube & telegram channel Copy Rights Reserved

36. 1943ರಲ್ಲಿ ಸುಭಾಷ್‌ಚಂದ್ರರು ಸಿಂಗಾಪುರಕ್ಕೆ ಬಂದು ಐಎನ್ ಎ( INA)ಯ ನಾಯಕತ್ವ ವಹಿಸಿಕೊಂಡರು.

37. ಸಿಂಗಾಪುರದಲ್ಲಿ 'ಸ್ವತಂತ್ರ ಭಾರತದ ಹಂಗಾಮಿ ಸರ್ಕಾರ'ವನ್ನು ಸ್ಥಾಪಿಸಿದವರು - ಸುಭಾಷ್‌ಚಂದ್ರ ಬೋಸ್

38. ''ಚಲೋ ದಿಲ್ಲಿ', 'ಜೈಹಿಂದ್' ಎಂಬ ಘೋಷಣೆಗಳನ್ನು ಹೊರಡಿಸಿದವರು - ಸುಭಾಷ್‌ಚಂದ್ರ ಬೋಸ್

39. ಡಾ. ಬಿ.ಆರ್. ಅಂಬೇಡ್ಕರ್ ರವರು ಅಸ್ಪೃಶ್ಯರ ಪ್ರಗತಿಗಾಗಿ "ಮೂಕನಾಯಕ" ಮತ್ತು "ಬಹಿಷ್ಕೃತ ಭಾರತ" ಎಂಬ ಪತ್ರಿಕೆಗಳ ಸಂಪಾದಕರಾಗಿದ್ದರು.

40. . ಡಾ. ಬಿ.ಆರ್. ಅಂಬೇಡ್ಕರ್ ರವರು ಸ್ಥಾಪಿಸಿದ ಸಂಘಟನೆ ಯಾವುದು - ಬಹಿಷ್ಕೃತ ಹಿತಕಾರಿಣಿ ಸಭಾ

ಮುಖ್ಯ ಇಸವಿಗಳು

| | |
|---|---|
| ಭಾರತ ರಾಷ್ಟ್ರೀಯ ಕಾಂಗ್ರೆಸಿನ ಸ್ಥಾಪನೆ | 1885 |
| ಮಂದಗಾಮಿಗಳ ಕಾಲ | 1885 -1905 |
| ತೀವ್ರಗಾಮಿಗಳ ಕಾಲ | 1905-1919 |
| ಬಂಗಾಳದ ವಿಭಜನ | 1905 |
| ಮುಸ್ಲಿಂ ಲೀಗಿನ ಸ್ಥಾಪನೆ | 1906 |



Scanned with OKEN Scanner

Navachethana education YouTube & telegram channel Copy Rights Reserved

| | |
|---|---|
| ಸೂರತ್ ಒಡಕು | 1907 |
| ಜಲಿಯನ್‌ವಾಲಾಬಾಗ್ ಹತ್ಯಾಕಾಂಡ | 1919 |
| ಗಾಂಧೀಜಿಯವರ ಜನನ | 1869, ಅಕ್ಟೋಬರ್ 2 |
| ಅಸಹಕಾರ ಚಳವಳಿ | 1920-1922 |
| ಚೌರಿಚೌರ ದುರಂತ | 1922 |
| ಪೂರ್ಣ ಸ್ವರಾಜ್ಯದ ಘೋಷಣೆ | 1929 |
| ಪೂರ್ಣ ಸ್ವರಾಜ್ಯ ದಿನಾಚರಣೆ | 1930 ಜನವರಿ 26 |
| ಉಪ್ಪಿನ ಸತ್ಯಾಗ್ರಹ | 1930 ಮಾರ್ಚ್ 12 |
| ಎರಡನೇ ವಿಶ್ವಸಮರ | 1939-1945 |
| ಭಾರತ ಬಿಟ್ಟು ತೊಲಗಿ ಚಳವಳಿ | 1942 |
| ಭಾರತಕ್ಕೆ ಅಧಿಕಾರ ಹಸ್ತಾಂತರಿಸುವ ಘೋಷಣೆ | 1947 ಜೂನ್ 3 |
| ಸ್ವತಂತ್ರ ಪಾಕಿಸ್ತಾನದ ರಚನೆ | 1947 ಆಗಸ್ಟ್ 14 |
| ಸ್ವತಂತ್ರ ಭಾರತದ ರಚನೆ | 1947 ಆಗಸ್ಟ್ 15 |

NAVACHETANA EDUCATIONS
7019752139



Scanned with OKEN Scanner

Navachethana education YouTube & telegram channel Copy Rights Reserved

# ಕರ್ನಾಟಕದ ಏಕೀಕರಣ ಮತ್ತು ಗಡಿ ವಿವಾದಗಳು

1.ಯಾವ ಕೃತಿಯಲ್ಲಿ ಕನ್ನಡನಾಡು ಕಾವೇರಿಯಿಂದಗೋದಾವರಿಯವರೆಗೆ ಇತ್ತು ಎಂದು ವರ್ಣಿಸಲಾಗಿದೆ - ಕವಿರಾಜಮಾರ್ಗ

2.1890 ರಲ್ಲಿ ಆರಂಭವಾದ 'ಕರ್ನಾಟಕ ವಿದ್ಯಾವರ್ಧಕ ಸಂಘ'ದ ಅಧ್ಯಕ್ಷರಾಗಿದ್ದವರು - ರಾ.ಹಾ. ದೇಶ ಪಾಂಡೆ

3. ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಯಾದ ವರ್ಷ - 1915

4. "ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು "ಗೀತೆಯನ್ನು ರಚಿಸಿದವರು - ಹುಯಿಲಗೋಳ ನಾರಾಯಣ ರಾವ್

5. ಬೆಳಗಾವಿಯಲ್ಲಿ ಕಾಂಗ್ರೇಸ್ ಅಧಿವೇಶನ ನಡೆದ ವರ್ಷ - 1924

6. ಕರ್ನಾಟಕ ಗತವೈಭವ' ಕೃತಿಯನ್ನು ಬರೆದವರು - ಆಲೂರು ವೆಂಕಟರಾಯರು

7. "ಕನ್ನಡ ಕುಲ ಪುರೋಹಿತ' ಎಂದು ಹೆಸರಾದವರು - ಆಲೂರು ವೆಂಕಟರಾಯರು

8. ಕನ್ನಡದ ಮೊದಲ 'ರಾಷ್ಟ್ರಕವಿ' - ಮಂಜೇಶ್ವರ ಗೋವಿಂದ ಪೈ



Scanned with OKEN Scanner

Navachethana education YouTube & telegram channel Copy Rights Reserved

9. ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ನಡೆದ ಕಾರ್ಯ ಗಳಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ

A.1951-52ರಲ್ಲಿ ಲೋಕಸಭೆಗೆ ಪ್ರಥಮ ಸಾರ್ವತ್ರಿಕ ಚುನಾವಣೆ ನಡೆಯಿತು. ಚುನಾವಣೆಯ ನಂತರ ಉಗ್ರ ಚಳುವಳಿಯ ಮನೋಭಾವದ "ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್' ಎಂಬ ಪಕ್ಷ ಉದಯಿಸಿತು (1952).☑

B.ಈ ಪಕ್ಷ ಏಕೀಕರಣಕ್ಕಾಗಿ ಸತ್ಯಾಗ್ರಹ ನಡೆಸಿ ಸುಮಾರು 5000 ಮಂದಿ ಬಂಧಿತರಾಗಿ ಸೆರೆಮನೆ ಸೇರಿದರು.☑

C.ಅಂದಿನ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯನವರು ಏಕೀಕರಣಕ್ಕೆ ಬೆಂಬಲವನ್ನು ನೀಡಿದರು. ಇವರು ಏಕೀಕರಣದ ಪರವಾಗಿ ರಾಜ್ಯಾದ್ಯಂತ ಪ್ರವಾಸ ಕೈಗೊಂಡರು.☑

ಮೇಲಿನ ಎಲ್ಲವೂ ಸರಿಯಾಗಿದೆ

10. 1952ರಲ್ಲಿ ಪೊಟ್ಟಿ ಶ್ರೀರಾಮುಲು ಎಂಬ ಆಂಧ್ರದ ಮುಖಂಡರು ಆಂಧ್ರ ಪ್ರಾಂತ್ಯವನ್ನು ರಚಿಸಲು ಒತ್ತಾಯಿಸಿ ಉಪವಾಸ ಕೈಗೊಂಡು 58 ದಿನಗಳ ನಂತರ ನಿಧನ ಹೊಂದಿದರು.

- ಆಂಧ್ರ ಪ್ರದೇಶ ರಚನೆಯಾಯಿತು (1953)

11. ರಾಜ್ಯ ಪುನರ್‌ವಿಂಗಡಣಾ ಆಯೋಗ' ಅಧ್ಯಕ್ಷರು ಎಸ್. ಫಜಲ್ ಅಲಿ

12. 'ರಾಜ್ಯ ಪುನರ್‌ವಿಂಗಡಣಾ ಆಯೋಗ' ಸದಸ್ಯರು

- ಎಚ್.ಎನ್, ಕುಂಜ್ರು ಮತ್ತು ಕೆ.ಎಂ.ಪಣಿಕ್ಕರ್.



Scanned with OKEN Scanner

Navachethana education YouTube & telegram channel Copy Rights Reserved

- ಆಯೋಗವು 1955ರಲ್ಲಿ ವರದಿಯನ್ನು ಸಲ್ಲಿಸಿತು.

13. ಏಕೀಕರಣಗೊಂಡ ಕರ್ನಾಟಕವು 1956ರ ನವೆಂಬರ್ 1 ರಂದು ' ವಿಶಾಲ ಮೈಸೂರು ರಾಜ್ಯ' ಎಂಬ ಹೆಸರಿನೊಂದಿಗೆ ಅಸ್ತಿತ್ವಕ್ಕೆ ಬಂತು.

14. ಮೈಸೂರು ಪ್ರಾಂತ್ಯಕ್ಕೆ 'ಕರ್ನಾಟಕ' ಎಂದು ನಾಮಕರಣವಾದ ವರ್ಷ

- 1973 ನವೆಂಬರ್ 1

15. ಮೈಸೂರು ಪ್ರಾಂತ್ಯಕ್ಕೆ 'ಕರ್ನಾಟಕ' ಎಂದು ನಾಮಕರಣವಾದಾಗ ಮುಖ್ಯಮಂತ್ರಿಗಳಾಗಿದ್ದವರು - ಡಿ.ದೇವರಾಜ ಅರಸ್

16. 1956ರಲ್ಲಿ ಉದಯಿಸಿದ ಮೈಸೂರು ರಾಜ್ಯಕ್ಕೆ ಎಸ್. ನಿಜಲಿಂಗಪ್ಪನವರು ಪ್ರಥಮ ಮುಖ್ಯಮಂತ್ರಿಗಳಾದರು.

## ಕರ್ನಾಟಕದ ಸಮಾಜಮುಖಿ ಚಳವಳಿಗಳು

1. "ಭೂಮಿಯು ಎಲ್ಲರ ಅವಶ್ಯಕತೆಯನ್ನು ಪೂರೈಸುತ್ತದೆ ಆದರೆ ಅವರ ದುರಾಸೆಯನ್ನಲ್ಲ" ಈ ಮಾತನ್ನು ಹೇಳಿದವರು ಯಾರು

- ಮಹಾತ್ಮ ಗಾಂಧೀಜಿ



Scanned with OKEN Scanner

Navachethana education YouTube & telegram channel Copy Rights Reserved

2. ಸಾಲುಮರದ ತಿಮ್ಮಕ್ಕ ಅಕ್ಷರಸ್ಥರಲ್ಲದಿದ್ದರೂ ಪರಿಸರ ಸಂರಕ್ಷಣೆಯ ಪಾಠ ಹೇಳಿಕೊಟ್ಟ ನಿಸ್ವಾರ್ಥ ಬದುಕು ಇವರದು ಇವರು ಎಷ್ಟು ಮರಗಳ ತಾಯಿ ಎಂದು ಹೆಸರಾಗಿದ್ದಾರೆ - 284

- 2019 ರಲ್ಲಿ ದೇಶದ ನಾಲ್ಕನೇ ಉನ್ನತ ನಾಗರಿಕ ಸಮ್ಮಾನವಾದ ಪದ್ಮಶ್ರೀ ಪ್ರಶಸ್ತಿ ಸಿಕ್ಕಿತು.

3. ಚಿಕ್ಕೋ ಚಳುವಳಿ ಅಥವಾ ಅಪ್ಪಿಕೋ ಚಳವಳಿಯಲ್ಲಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ವ್ಯಕ್ತಿ ಯಾರು

- ಸುಂದರಲಾಲ್ ಬಹುಗುಣ

4. ಯಾವ ರಾಜ್ಯದಲ್ಲಿ 'ಸಾವಯವ ಕೃಷಿ ಮಿಷನ್' ಸ್ಥಾಪನೆ ಗೊಂಡು ಸಾವಯವ ಕೃಷಿಗೆ ಪ್ರೋತ್ಸಾಹ ಸಿಗುತ್ತಿದೆ. ಈ ನಿಟ್ಟಿನಲ್ಲಿ ಈ ರಾಜ್ಯ ಭಾರತದಲ್ಲೇ ಮುಂಚೂಣಿಯಲ್ಲಿದೆ - ಕರ್ನಾಟಕ

5. ಕರ್ನಾಟಕದ ಮೊದಲ ಮಹಿಳಾ ಬಿ.ಎ.ಆನರ್ಸ್ ಪದವೀಧರರು ಯಾರು

- ಶ್ರೀರಂಗಮ್ಮ ಮತ್ತು ರುಕ್ಕಿಣಮ್ಮ

6. ಸ್ವಾತಂತ್ರ್ಯೋತ್ಸವ ಕರ್ನಾಟಕದಲ್ಲಿ ನಾವು ಕಾಣುವ ಪ್ರಥಮ ರೈತ ಹೋರಾಟ 1951 ಯಾವ ಜಿಲ್ಲೆಯ ಕಾಗೋಡಿನಲ್ಲಿ ನಡೆಯಿತು

- ಶಿವಮೊಗ್ಗ



Scanned with OKEN Scanner

Navachethana education YouTube & telegram channel Copy Rights Reserved

7. “ಇತರರ ಅನುಭವವನ್ನು ನೀವು ಅರ್ಥಮಾಡಿಕೊಳ್ಳಲು ಸಾಧ್ಯವಿದೆ. ಆದರೆ ಆ ಅನುಭವವನ್ನು ನೀವು ಅನುಭವಿಸಲು ಸಾಧ್ಯವೇ ಇಲ್ಲ" ದಲಿತ ಮತ್ತು ಮಹಿಳಾ ನೆಲೆಗಳಿಗೆ ಅಕ್ಷರಶಃ ಅನ್ವಯವಾಗುತ್ತದೆ. ಈ ಮಾತನ್ನು ಹೇಳಿದವರು ಯಾರು - ಆರ್.ಡಿ.ಲಿಯಾಂಗ್

8. ಸ್ವಾಮಿ ವಿವೇಕಾನಂದರ ಮೈಸೂರಿನ ಭೇಟಿಯ ನಂತರ ಅವರ ಸಲಹೆಯ ಮೇರೆಗೆ ದಲಿತ ವರ್ಗದ ಪ್ರಮುಖ ಪ್ರಶ್ನೆಗಳನ್ನು ಅಂದಿನ ಮೈಸೂರಿನ ಮಹಾರಾಜರಾದ ಯಾರು ಗಾಂಭೀರವಾಗಿ ಪರಿಗಣಿಸಿ ದಲಿತರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆದರು - 10ನೇ ಚಾಮರಾಜ ಒಡೆಯ

9. 1936ರಲ್ಲಿ ದಕ್ಷಿಣ ಭಾರತದ ದಲಿತ ನಾಯಕರಲ್ಲಿ ಪ್ರಮುಖರಾದ ಯಾರ ಸಮ್ಮುಖದಲ್ಲಿ ಮೈಸೂರು ಅರಮನೆಗೆ ದಲಿತರ ಪ್ರವೇಶವಾಯಿತು

- ಎಂ.ಸಿ.ರಾಜಾ

10. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ 1970ರಲ್ಲಿ ಭೀಮಾಸೇನಾ ಸಂಘಟನೆಯನ್ನು ಹುಟ್ಟು ಹಾಕಿದವರು

- ಬಿ.ಶ್ಯಾಮ್ ಸುಂದರ್

11. ಮೈಸೂರಿನ ಕಾರ್ಯಕ್ರಮವೊಂದರಲ್ಲಿ 'ಕನ್ನಡ ಸಾಹಿತ್ಯ ಬೂಸಾ ಸಾಹಿತ್ಯವಾಗಿದೆ' ಎಂದು ಅಭಿಪ್ರಾಯಪಟ್ಟವರು ಯಾರು

- ಬಸವಲಿಂಗಪ್ಪ



Scanned with OKEN Scanner

Navachethana education YouTube & telegram channel Copy Rights Reserved

**12. 'ಬಸವಲಿಂಗಪ್ಪ ಬೂಸಾ' ಪ್ರಕರಣ 1973 ಇದು ಯಾವುದಕ್ಕೆ ಸಂಬಂಧಿಸಿದೆ - ದಲಿತ ಚಳವಳಿ**

**13. 1960ರ ದಶಕದ ನಂತರ ಬೆಂಗಳೂರಿನಲ್ಲಿ ಅನ್ಯ ಭಾಷಿಕರ ಅಬ್ಬರ ಹೆಚ್ಚಾದಾಗ ಈ ಕೆಳಕಂಡವರಲ್ಲಿ ಯಾರು ಕರ್ನಾಟಕದ ಮೇಲ್ಗಗೈ ಯನ್ನು ಸಾಧಿಸುವಲ್ಲಿ ಸಫಲರಾದರು - ಅ.ನ.ಕೃ., ಚಿದಾನಂದಮೂರ್ತಿ, ಮ.ನ. ರಾಮಮೂರ್ತಿ, ವಾಟಾಳ್ ನಾಗರಾಜ್**

**14. ಗೋಕಾಕ್ ಚಳವಳಿ ಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿರಿ**

A. 1982ರಲ್ಲಿ ಗೋಕಾಕ ವರದಿಯ ಅನುಷ್ಠಾನಕ್ಕಾಗಿ ಒಂದು ನಿರ್ಣಾಯಕ ಚಾರಿತ್ರಿಕ ಹೋರಾಟ ಪ್ರಾರಂಭವಾಯಿತು. ಇಡೀ ಕನ್ನಡ ಸಮುದಾಯ ಅಭೂತಪೂರ್ವ ರೀತಿಯಲ್ಲಿ ಈ ಹೋರಾಟವನ್ನು ನಡೆಸಿತು.☑

B. ಕರ್ನಾಟಕದಲ್ಲಿದ್ದ ಭಾಷಾ ಅಲ್ಪಸಂಖ್ಯಾತರು ಕನ್ನಡವನ್ನು ಕಡ್ಡಾಯವಾಗಿ ಕಲಿಯದೆ ಅವರ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುತ್ತೇವೆಂಬ ಹಟಕ್ಕೆ ಬಿದ್ದರು. ಅಂದಿನ ಮುಖ್ಯಮಂತ್ರಿಗಳಾದ ಆರ್. ಗುಂಡೂರಾಯರು ಉಡುಪಿಗೆ ಹೋಗಿದ್ದ ಸಂದರ್ಭದಲ್ಲಿ ಅಲ್ಲಿಯ ಮಠಾಧಿಪತಿಗಳು ಸಂಸ್ಕೃತಕ್ಕೆ ಪ್ರಾಶಸ್ತ್ರ ಕೊಡಬೇಕೆಂದು ಒತ್ತಾಯಿಸಿದರು.☑

C. ಇದರ ಪರಿಣಾಮವಾಗಿ ಶಿಕ್ಷಣ ಯಾವ ಮಾಧ್ಯಮದಲ್ಲಿ ಇರಬೇಕು. ಎನ್ನುವ ಪ್ರಶ್ನೆಯನ್ನು ಬಿಟ್ಟು ಶಿಕ್ಷಣದಲ್ಲಿ ಭಾಷೆಗಳ ಸ್ಥಾನಗಳು ಹೇಗಿರಬೇಕು ಎಂಬುದನ್ನು ನಿರ್ಧರಿಸಲು ಒಂದು ಸಮಿತಿ ರಚನೆಯಾಯಿತು☑



Scanned with OKEN Scanner

Navachethana education YouTube & telegram channel Copy Rights Reserved

D. . ಡಾ. ವಿನಾಯಕ ಕೃಷ್ಣ ಗೋಕಾಕರ ಅಧ್ಯಕ್ಷತೆಯಲ್ಲಿ ಭಾಷಾ ಸಮಿತಿ ರಚನೆಯಾಯಿತು. ಈ ಸಮಿತಿಯು ಕನ್ನಡ ಭಾಷೆಗೆ ಪ್ರಥಮ ಆದ್ಯತೆ ಮತ್ತು ಕಡ್ಡಾಯ ಮಾಡಬೇಕೆಂದು ಶಿಫಾರಸು ಮಾಡಿತು, ಈ ಸಮಿತಿಯು ತ್ರಿಭಾಷಾ ಸೂತ್ರಕ್ಕೆ 350 ಅಂಕಗಳನ್ನು ನಿಗದಿಪಡಿಸಿತು. ತ್ರಿಭಾಷಾ ಪರೀಕ್ಷೆಯಲ್ಲಿ ಕನ್ನಡವು 150 ಅಂಕಗಳ ಪಥಮ ಭಾಷೆ ಆಗಿರಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಿತು. ☑

ಮೇಲಿನ ಎಲ್ಲವೂ ಸರಿಯಾಗಿದೆ

**15. ಗೋಕಾಕ್ ಚಳುವಳಿಯ ಪ್ರಮುಖ ಘೋಷಣೆ ಯಾವುದಾಗಿತ್ತು**

- 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ
- "ಏನೇ ಬರಲಿ ಕನ್ನಡ ಇರಲಿ'
- ಕರ್ನಾಟಕದಲ್ಲಿ ಕನ್ನಡದ ಉಸಿರು ತುಂಬಲಿ &
  "ಗೋಕಾಕ್ ವರದಿ ಜಾರಿಗೆ ಬರಲಿ"

## ಕರ್ನಾಟಕ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ

**1.ಕರ್ನಾಟಕದಲ್ಲಿ 1983 ರಲ್ಲಿ ಅಸ್ತಿತ್ವಕ್ಕೆ ಬಂದ ಜನತಾ ತೆಯಲ್ಲಿ ಸರ್ಕಾರ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿತು ಇದರ ರೂವಾರಿಯಾರಾಗಿದ್ದರು - ನಜೀರ್ ಸಾಬ್**



Scanned with OKEN Scanner

Navachethana education YouTube & telegram channel Copy Rights Reserved

2. ಭೂಮಿಯ ಮೇಲಿನ ಭೂಮಾಲೀಕ ವರ್ಗದ ಹಿಡಿತವನ್ನು ಮಿತಿಗೊಳಿಸುವುದು ಈ ಕೆಳಕಂಡ ಯಾವುದರ ಉದ್ದೇಶವಾಗಿತ್ತು

- ಜಮೀನ್ದಾರಿ ಪದ್ಧತಿ

3. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಭಾರತದಲ್ಲೇ ಪ್ರಥಮವಾಗಿ ಹಿಂದುಳಿದ ವರ್ಗಗಳ ಆಯೋಗವು ನ್ಯಾಯಮೂರ್ತಿ ಲೆಸ್ತೆ ಸಿ. ಮಿಲ್ಲರ್ ಅವರ ಅಧ್ಯಕ್ಷತೆಯಲ್ಲಿ ಯಾವಾಗ ನೇಮಕವಾಯಿತು - 1918

4. ಮುಖ್ಯಮಂತ್ರಿ ಡಿ.ದೇವರಾಜ್ ಅರಸ್‌ರವರು 1975ರಲ್ಲಿ ಯಾರ ನೇತೃತ್ವದಲ್ಲಿ ಪ್ರಥಮ ಹಿಂದುಳಿದ ವರ್ಗಗಳ ಆಯೋಗವನ್ನು ನೇಮಿಸಿದರು

- ಎಲ್.ಜಿ.ಹಾವನೂರು

5. ಹಾವನೂರು ಆಯೋಗದ ವರದಿಯಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಲು ಯಾವಾಗ ಟಿ.ವೆಂಕಟಸ್ವಾಮಿ ಆಯೋಗವನ್ನು ನೇಮಕ ಮಾಡಲಾಯಿತು - 1983

6. ಕೇಂದ್ರ ಸರ್ಕಾರವು 1955ರಲ್ಲಿ ಬಲವಂತರಾಯ್ ಮೆಹತಾ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು ಸಮಿತಿಯು ಎಷ್ಟು ಹಂತದ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಶಿಫಾರಸ್ಸು ಮಾಡಿತು

- 3 ಹಂತ

7. 1974ರಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು

- ಡಿ.ದೇವರಾಜ್ ಅರಸ್



Scanned with OKEN Scanner

Navachethana education YouTube & telegram channel Copy Rights Reserved

## ವಿವಿಧ ಕ್ಷೇತ್ರಗಳಲ್ಲಿ ಮುನ್ನಡೆ

1. 20ನೇ ಶತಮಾನದ ಕೊನೆಯವರೆಗೂ ಬಹುವಾಗಿ ಬಳಕೆಯಾಗುತ್ತಿದ್ದ ಸಂಪರ್ಕ ಮಾಧ್ಯಮ - ಅಂಚೆ & ತಂತಿ

2. ಪ್ರಾಚೀನ ಕಾಲದಲ್ಲಿ ಪಾರಿವಾಳ, ಒಂಟೆ ಮುಂತಾದವುಗಳನ್ನು ಸಂಪರ್ಕ ಮಾಧ್ಯಮವನ್ನಾಗಿಯೂ ಬಳಸಲಾಗುತ್ತಿತ್ತು.

3. ಸಮೂಹ ಮಾಧ್ಯಮಗಳನ್ನು ಪ್ರಮುಖವಾಗಿ ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ

- ಮುದ್ರಣ ಮಾಧ್ಯಮ
- ವಿದ್ಯುನ್ಮಾನ ಮಾಧ್ಯಮ
- ಮನರಂಜನಾ ಮಾಧ್ಯಮ

4. ಕನ್ನಡದಲ್ಲಿ ಪ್ರಕಟವಾದ ಮೊಟ್ಟಮೊದಲ ಪತ್ರಿಕೆ 'ಮಂಗಳೂರು ಸಮಾಚಾರ',

5. 20ನೇ ಶತಮಾನದ ಕೊನೆಯ ಭಾಗದಲ್ಲಿ ವಿದ್ಯುನ್ಮಾನದ ಕ್ರಾಂತಿ ಪ್ರಾರಂಭವಾಯಿತು. 'ದೂರದರ್ಶನ' ಜನರ ಪ್ರಮುಖ ಆಕರ್ಷಣೆಯಾಯಿತು.

6. ಗಣಕಯಂತ್ರ ತಂತ್ರಾಂಶ ಮತ್ತು ತಂತಿ ಸಂವಹನಗಳ ಸಂಯೋಜನೆ 1990ರ ದಶಕದಲ್ಲಿ ದೊಡ್ಡ ಕ್ರಾಂತಿಯನ್ನು ಸೃಷ್ಟಿಸಿತು.



Scanned with OKEN Scanner

Navachethana education YouTube & telegram channel Copy Rights Reserved

7. ಕರ್ನಾಟಕ ಸರಕಾರವು 1997ರಲ್ಲಿ ಮಾಹಿತಿ ತಂತ್ರಜ್ಞಾನ ಕುರಿತ ಹೊಸ ಯೋಜನೆಯನ್ನು ಸಿದ್ಧಪಡಿಸಿತು.

8. ಭಾರತ ಸರಕಾರ ಮತ್ತು ಕರ್ನಾಟಕ ಸರಕಾರಗಳು ಜಂಟಿಯಾಗಿ 2000ದಲ್ಲಿ ಸೈಬರ್ ಪಾರ್ಕಿನ ಯೋಜನೆಯನ್ನು ಪ್ರಾರಂಭಿಸಿದವು.

9. 1997ರಲ್ಲಿ ವಿಲ್ಮಟ್ ಎಂಬ ವಿಜ್ಞಾನಿಯು ಪಪಂಚದ ಮೊಟ್ಟಮೊದಲ ತದ್ರೂಪಿ ಪ್ರಾಣಿ ಕುರಿಯೊಂದನ್ನು (ಡಾಲಿ) ಸೃಷ್ಟಿಸಿದನು.

10. ಜೈವಿಕ ತಂತ್ರಜ್ಞಾನದ ಪಾರ್ಕ್ ಇರುವ ಕರ್ನಾಟಕದ ಜಿಲ್ಲೆಗಳಾವುವು

ಬೆಂಗಳೂರು & ಧಾರವಾಡ

11. 1948ರಲ್ಲಿ ಕೇಂದ್ರ ಸರ್ಕಾರ ರೂಪಿಸಿದ ನೀತಿಯ ಹಿನ್ನೆಲೆಯಲ್ಲಿ ಕರ್ನಾಟಕದ ಕೈಗಾರಿಕಾ ನೀತಿಗಳು ರೂಪುಗೊಂಡಿವೆ.

12. ಕರ್ನಾಟಕ ಸರ್ಕಾರವು 1996ರಲ್ಲಿ ತನ್ನದೇ ಆದ ಕೈಗಾರಿಕಾ ನೀತಿಯನ್ನು ರೂಪಿಸಿತು.

13. "ಗೃಹಕೈಗಾರಿಕೆಗಳೇ ದೇಶವನ್ನು ಪ್ರಗತಿ ಪಥದತ್ತ ಕೊಂಡೊಯ್ಯುವ ದೀವಟಿಕೆಗಳು" ಹೇಳಿಕೆ ನೀಡಿದವರು - ಮಹಾತ್ಮ ಗಾಂಧೀಜಿ





Scanned with OKEN Scanner